। ಓಂ ಶ್ರೀ ಗುರುಬಸವಲಿಂಗಾಯ ನಮಃ ॥

ಸ್ಥಾಪನೆ:1991

# ಬಸವ ವೇದಿಕೆ (ರಿ)

ಬೆಂಗಳೂರು



# ಬಸವ ಜ್ಯೋತಿ

ಇಪ್ಪತ್ತಾರನೇ ವರ್ಷದ

## ಬಸವ ಜಯಂತಿ ಆಚರಣೆ

ಹಾಗು

## 'ಬಸವಶ್ರೀ' ಮತ್ತು 'ವಚನ ಸಾಹಿತ್ಯಶ್ರೀ'

## ಪ್ರಶಸ್ತಿ ಪ್ರದಾನ ಸಮಾರಂಭ-2016

ದಿನಾಂಕ 15.5.2016 ರಂದು ಭಾನುವಾರ
ರವೀಂದ್ರ ಕಲಾಕ್ಷೇತ್ರ, ಬೆಂಗಳೂರು

ಶರಣರ ಬರವೆಮಗೆ ಪ್ರಾಣ ಜೀವಾಳವಯ್ಯ

# ಬಸವ ವೇದಿಕೆ (ರಿ)

ಬೆಂಗಳೂರು

## 'ಬಸವಶ್ರೀ'

ಪ್ರಶಸ್ತಿ ಪುರಸ್ಕೃತರು

| | |
|---|---|
| ಡಾ. ಬಿ.ಡಿ. ಜತ್ತಿಯವರು | 1996 |
| ಡಾ. ಎಸ್. ನಿಜಲಿಂಗಪ್ಪನವರು | 1997 |
| ಡಾ. ಎಂ.ಸಿ. ಮೋದಿಯವರು | 1998 |
| ಶ್ರೀ ಕೆ.ಎಂ. ನಂಜಪ್ಪನವರು | 1999 |
| ನಾಡೋಜ ಪ್ರೊ. ದೇ. ಜವರೇಗೌಡರವರು | 2000 |
| ಡಾ. ಎಚ್. ನರಸಿಂಹಯ್ಯನವರು | 2001 |
| ನ್ಯಾಯಮೂರ್ತಿ ಡಾ. ಶಿವರಾಜ ವಿ. ಪಾಟೀಲ್‌ರವರು | 2002 |
| ನಾಡೋಜ ಡಾ. ಚಂದ್ರಶೇಖರ ಕಂಬಾರರವರು | 2003 |
| ಡಾ. ಡಿ.ಎಂ. ನಂಜುಂಡಪ್ಪನವರು | 2004 |
| ನಾಡೋಜ ಡಾ. ಪಾಟೀಲ ಪುಟ್ಟಪ್ಪನವರು | 2005 |
| ನಾಡೋಜ ನ್ಯಾ. ಡಾ. ವಿ.ಎಸ್. ಮಳಿಮಠರವರು | 2006 |
| ಪದ್ಮಶ್ರೀ ಡಾ. ಎಸ್.ಪಿ. ಬಾಲಸುಬ್ರಹ್ಮಣ್ಯಂರವರು | 2007 |
| ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪನವರು | 2008 |
| ಡಾ. ವೀರೇಂದ್ರ ಹೆಗ್ಗಡೆಯವರು | 2009 |
| ಡಾ. ಸುಧಾಮೂರ್ತಿಯವರು | 2010 |
| ನಾಡೋಜ ಏಣಗಿ ಬಾಳಪ್ಪನವರು | 2011 |
| ನಾಡೋಜ ಡಾ. ಚನ್ನವೀರಕಣವಿಯವರು | 2012 |
| ನಾಡೋಜ ಡಾ. ಎಂ.ಎಂ. ಕಲಬುರ್ಗಿಯವರು | 2013 |
| ಭಾರತರತ್ನ ಡಾ. ಸಿ.ಎನ್.ಆರ್. ರಾವ್ | 2014 |
| ನಾಡೋಜ ಡಾ. ಜಿ. ವೆಂಕಟಸುಬ್ಬಯ್ಯನವರು | 2015 |

## 'ವಚನ ಸಾಹಿತ್ಯಶ್ರೀ'

ಪ್ರಶಸ್ತಿ ಪುರಸ್ಕೃತರು

| | |
|---|---|
| ಡಾ. ಸಿ.ಪಿ. ಕೃಷ್ಣಕುಮಾರ್‌ರವರು | 1997 |
| ಡಾ. ಎಸ್. ವಿದ್ಯಾಶಂಕರರವರು | 1998 |
| ಡಾ. ಎಂ. ಚಿದಾನಂದಮೂರ್ತಿಯವರು | 1999 |
| ಪ್ರೊ. ಟಿ.ಆರ್. ಮಹಾದೇವಯ್ಯನವರು | 2000 |
| ಡಾ. ಎಸ್.ಆರ್. ಗುಂಜಾಳ್‌ರವರು | 2001 |
| ಶ್ರೀ ರಂಜಾನ್ ದರ್ಗಾರವರು | 2002 |
| ಡಾ. ಶೈಲಜಾ ಉಡಚಣರವರು | 2003 |
| ಡಾ. ಸಾ.ಶಿ. ಮರುಳಯ್ಯನವರು | 2004 |
| ಶ್ರೀ ಇಬ್ರಾಹೀಮ ನ. ಸುತಾರರವರು | 2005 |
| ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್‌ರವರು ಹಾಗೂ ಡಾ. ಅಜಯ್ ಕುಮಾರ್ ಸಿಂಹರವರು | 2006 |
| ವಾಙ್ಮಯತಪಸ್ವಿ ಶ್ರೀ ಕುಮಾರ ನಿಜಗುಣರವರು | 2007 |
| ಡಾ. ಜಯಶ್ರೀ ದಂಡೆಯವರು | 2008 |
| ಶ್ರೀ ಪಂಡಿತ ವೆಂಕಟೇಶ್‌ಕುಮಾರರವರು | 2009 |
| ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರು | 2010 |
| ಡಾ. ವೀಣಾ ಬನ್ನಂಜೆಯವರು | 2011 |
| ಶ್ರೀಮತಿ ಕಸ್ತೂರಿ ಶಂಕರ್‌ರವರು | 2012 |
| ಡಾ. ಜಿ.ವಿ. ಜಯಾ ರಾಜಶೇಖರ್‌ರವರು | 2013 |
| ಡಾ. ಲತಾ ರಾಜಶೇಖರ್‌ರವರು ಹಾಗೂ ಡಾ. ಆರ್. ಶಿವಣ್ಣನವರು | 2014 |
| ಶ್ರೀ ಕೆ.ಸಿ. ಶಿವಪ್ಪನವರು ಹಾಗೂ ಶ್ರೀಮತಿ ಸಂಗೀತ ಕಟ್ಟಿಯವರು | 2015 |

ಸ್ಥಾಪನೆ: 1991

# ಬಸವ ವೇದಿಕೆ (ರಿ)

ನಂ.10, 'ಬಸವೇಶ್ವರ ನಿಲಯ', 21ನೇ ಅಡ್ಡರಸ್ತೆ, 3ನೇ ಘಟ್ಟ, 4ನೇ ಹಂತ, ಬಸವೇಶ್ವರನಗರ, ಬೆಂಗಳೂರು–560 079.

ಇಮೇಲ್: drcsomasekhara9@gmail.com ಮೊಬೈಲ್: 9880191228, 9902820022, 9845280303

## ಕೃತಜ್ಞತಾ ಪೂರ್ವಕ ಹಾರೈಕೆ

ಬಸವ ವೇದಿಕೆಗೆ ಈಗ ಇಪ್ಪತ್ತಾರನೇ ವರ್ಷ. ಕಳೆದ ವರ್ಷ ರಜತ ವರ್ಷ ಆಚರಿಸಿದ ಸಂಭ್ರಮ. ವೇದಿಕೆಗೆ ಇದೊಂದು ಐತಿಹಾಸಿಕ ಸಂದರ್ಭ. ತಮ್ಮ ಬಹುಮುಖ ಸಾಮರ್ಥ್ಯಗಳಿಂದ ಸಮಾಜಮುಖಿಗಳಾಗಿ ನಿಸ್ವಾರ್ಥ, ನಿರ್ಲಿಪ್ತ ಭಾವದಿಂದ ಸೇವೆ ಸಲ್ಲಿಸಿರುವ ನಾಡಿನ, ರಾಷ್ಟ್ರದ ಮತ್ತು ಅಂತರಾಷ್ಟ್ರೀಯ ಖ್ಯಾತಿಯ ಹಲವಾರು ಹಿರಿಯ ಧೀಮಂತ ಸಾಧಕರು ನಮ್ಮ ಪ್ರತಿಷ್ಠಿತ 'ಬಸವಶ್ರೀ' ಮತ್ತು 'ವಚನಸಾಹಿತ್ಯಶ್ರೀ' ಪ್ರಶಸ್ತಿಗಳನ್ನು ಸ್ವೀಕರಿಸುವುದರ ಮೂಲಕ ಬಸವ ವೇದಿಕೆಯ ಆಶಯಗಳನ್ನು ಪೂರ್ಣಗೊಳಿಸಿ ಪುರಸ್ಕಾರದ ಮಹತ್ವವನ್ನು ಬೆಳಗಿಸಿದ್ದಾರೆ. ಇಡೀ ರಾಷ್ಟ್ರದಲ್ಲಿಯೇ 'ಬಸವಶ್ರೀ' ಪ್ರಶಸ್ತಿಯ ಕಲ್ಪನೆಯನ್ನು ಪ್ರಪ್ರಥಮ ಬಾರಿಗೆ ಆವಿಷ್ಕಾರಗೊಳಿಸಿದ ಹಿರಿಮೆಗೆ ಬಸವ ವೇದಿಕೆ ಪಾತ್ರವಾಗಿದೆ.

ಈ ಇಪ್ಪತ್ತಾರು ವರ್ಷಗಳಲ್ಲಿ ಬಸವ ವೇದಿಕೆಯ ನೈಜ ತತ್ವ–ಸತ್ವ–ಮಹತ್ವಗಳನ್ನು ಇಡೀ ರಾಜ್ಯದಾದ್ಯಂತ ಮನಗಾಣಿಸುವ ದಿಸೆಯಲ್ಲಿ ನಿರಂತರವಾಗಿ ಮಾರ್ಗದರ್ಶನ ಮಾಡುತ್ತಾ ಬಂದಿರುವ ನಾಡಿನ ಸಮಸ್ತ ಧಾರ್ಮಿಕ ಗುರು ಸಂಕುಲ, ಆತ್ಮೀಯರು, ಅಭಿಮಾನಿಗಳು ಹಾಗೂ ಕಾರ್ಯಕರ್ತರುಗಳೆಲ್ಲರಿಗೆ ಬಸವ ವೇದಿಕೆಯ ಪರವಾಗಿ ಅನಂತ ಕೃತಜ್ಞತೆಗಳು. ಬಸವ ವೇದಿಕೆಯ ಮುಂದಿನ ಎಲ್ಲಾ ಸೃಜನಶೀಲ ಯೋಜನೆಗಳಿಗೆ ಸಹಕಾರವನ್ನು ಕೋರುತ್ತಾ ಸರ್ವರಿಗೂ ಕೃತಜ್ಞತಾಪೂರ್ವಕವಾದ ಧನ್ಯವಾದಗಳನ್ನು ಸಮರ್ಪಿಸಬಯಸುತ್ತೇವೆ.

**ಶರಣು ಶರಣಾರ್ಥಿ**

**ಡಾ. ಸಿ. ಸೋಮಶೇಖರ,** ಐಎಎಸ್(ನಿ)
ಸಂಸ್ಥಾಪಕರು, ಅಧ್ಯಕ್ಷರು ಮತ್ತು ಪದಾಧಿಕಾರಿಗಳು
ಬಸವ ವೇದಿಕೆ, ಬೆಂಗಳೂರು

ಸ್ಥಾಪನೆ:1991

# ಬಸವ ವೇದಿಕೆ

ಬೆಂಗಳೂರು

ಬೆಂಗಳೂರಿನ ವಿಚಾರವಂತ ಸಹೃದಯಿಗಳು ಬಸವಾದಿ ಶರಣರ ವಿಚಾರಗಳನ್ನು ಅರಿತುಕೊಂಡು, ಅವುಗಳನ್ನು ಅನುಷ್ಠಾನಕ್ಕೆ ತರುವ ನಿಟ್ಟಿನಲ್ಲಿ ಪ್ರಚಾರ ಮಾಡಲು ಒಂದು ಸಂಘಟನೆಯ ಅಗತ್ಯವನ್ನು ಮನಗಂಡರು. ತ್ರಿಕಾಲಾಬಾಧಿತವಾದ ಶರಣರ ಮೌಲ್ಯಗಳನ್ನು ಜನರಿಗೆ ಮುಟ್ಟಿಸುವ ಉದ್ದೇಶವನ್ನು ರೂಪಿಸಿಕೊಂಡರು. ಶರಣರ ವೈಚಾರಿಕ ಹಾಗೂ ಜಾಗೃತ ಮನೋಭಾವ ಹೊಂದಿದವರನ್ನು, ಸಮಾಜಮುಖಿಯಾಗಿ ಸೇವೆ ಸಲ್ಲಿಸುತ್ತಿರುವ ಮಹನೀಯರನ್ನು ಗುರುತಿಸಿ ಬಸವ ಜಯಂತಿ ಆಚರಣೆಯ ಸಮಾರಂಭದಲ್ಲಿ ಗೌರವಿಸುವ ಒಂದು ವಿನಮ್ರ ಪ್ರಯತ್ನವು ಬಸವ ವೇದಿಕೆ ಆಶ್ರಯದಲ್ಲಿ ಅತ್ಯಂತ ಯಶಸ್ವಿಯಾಗಿ ಮುಂದುವರೆದುಕೊಂಡು ಬರುತ್ತಿದೆ.

ಬಸವಣ್ಣನವರೇ ಮೊದಲಾದ ಶರಣರ ವಿಚಾರಧಾರೆಗಳನ್ನು ವ್ಯಾಪಕವಾಗಿ ಪ್ರಚಾರ ಮಾಡುವ ದಿಟ್ಟ ಮಾರ್ಗವನ್ನು ಹಾಗೂ ಪ್ರಯತ್ನಶೀಲ ಹೆಜ್ಜೆ ಗುರುತುಗಳನ್ನು ಬಸವ ವೇದಿಕೆಯು ದಾಖಲಿಸುತ್ತಿದೆ.

ಶರಣರ ಸತ್ಯ ಶುದ್ಧ ಸಂದೇಶಗಳ ಪರಿಪಾಲನೆಯ ಸಾಧನೆಗಾಗಿ ಬಸವ ವೇದಿಕೆಯು ಶರಣ ಸಂಸ್ಕೃತಿಯ ಒಂದು ಕ್ರಿಯಾತ್ಮಕ ಚಲನಶೀಲ ಸಂಸ್ಥೆಯಾಗಿ 1991ರಲ್ಲಿ ಸ್ಥಾಪನೆಗೊಂಡಿತು. ಈ ವೇದಿಕೆಯ ಸ್ಥಾಪನೆ, ಕಾರ್ಯಯೋಜನೆಗಳ ಪರಿಕಲ್ಪನೆ ಮೂಡಿದ್ದು ಸಾಹಿತಿ, ಪ್ರಸ್ತುತ ನಿವೃತ್ತ ಐಎಎಸ್ ಅಧಿಕಾರಿ, ಜನಪ್ರಿಯ ವಾಗ್ಮಿ, ವಚನದಲ್ಲಿ ಅದ್ದಿದ ಮನಸ್ಸುಳ್ಳ ಡಾ. ಸಿ. ಸೋಮಶೇಖರ ಅವರಿಂದ. ಬೆಂಗಳೂರಿನಲ್ಲಿ ಬಸವ ಜಯಂತಿ ಆಚರಣೆಗೆ ಒಂದು ವಿಸ್ತೃತವಾದ ವಿಶಾಲತೆಯನ್ನು ಒದಗಿಸಿರುವ ಹೆಮ್ಮೆ ಇವರಿಗೆ ಹಾಗೂ ಬಸವ ವೇದಿಕೆಗೆ ಸಲ್ಲುತ್ತದೆ.

ಡಾ. ಸಿ. ಸೋಮಶೇಖರ ಅವರು ಮಂಡಿಸಿರುವ ಮಹಾ ಪ್ರಬಂಧ 'ವಚನಗಳಲ್ಲಿ ಸಾಮಾಜಿಕ ಚಿಂತನೆ'ಗೆ ಹಂಪಿ ಕನ್ನಡ ವಿಶ್ವವಿದ್ಯಾಲಯವು ಡಿಲಿಟ್ ಪದವಿಯನ್ನು ಪ್ರದಾನ ಮಾಡಿದೆ. ವಚನ ಸಾಹಿತ್ಯವು ಅವರ ಬದುಕಿನ ನಡೆ-ನುಡಿಗಳಲ್ಲಿ ಹಾಸು ಹೊಕ್ಕಾಗಿರುವುದನ್ನು ಸಹ ನಾವು ಗುರುತಿಸಬಹುದಾಗಿದೆ. ವಚನ ಸಾಹಿತ್ಯದ ಪ್ರಚಾರ ಕಾರ್ಯವು ಅವರಿಂದ ನಿರಂತರವಾಗಿ ನಡೆಯುತ್ತಿದೆ. ತಮ್ಮ ಅಧಿಕಾರದ ಅವಧಿಯಲ್ಲಿಯೇ ಸಾಹಿತ್ಯ ಚಿಂತನೆ ಹಾಗೂ ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಅವರಿಗೆ ವಿಶೇಷ ಆಸಕ್ತಿ. ಅದರಲ್ಲಿಯೂ ವಿಶೇಷವಾಗಿ ವಚನಸಾಹಿತ್ಯದ ಬಗ್ಗೆ ಅವರು ನಡೆಸಿದ ದೀರ್ಘ ಅಧ್ಯಯನ ಹಾಗೂ ಅನುಭಾವದ ಫಲಶೃತಿಯೇ ಬಸವವೇದಿಕೆಯ ಸ್ಥಾಪನೆಗೆ ಮೂಲ ಪ್ರೇರಣೆ.

ಬಸವ ವೇದಿಕೆ ನಡೆಸುವ ಕಾರ್ಯಕ್ರಮಗಳು ತಮ್ಮ ವೈಭವಕ್ಕೆ ಹಾಗೂ ಅರ್ಥಪೂರ್ಣತೆಗೆ

ಪ್ರಸಿದ್ಧಿಯಾಗಿವೆ. ಬೆಂಗಳೂರಿನಲ್ಲಿ ಪ್ರತಿವರ್ಷವೂ ನಡೆಯುತ್ತಿರುವ ಕಾರ್ಯಕ್ರಮಗಳು ಜನಮಾನಸದಲ್ಲಿ ಸವಿನೆನಪಿನ ಅಚ್ಚೊತ್ತುತ್ತಾ ಬಂದಿವೆ. ಸಮಾರಂಭಗಳಲ್ಲಿನ ಅಚ್ಚುಕಟ್ಟುತನ, ಭಾಗವಹಿಸುವ ಪ್ರಖ್ಯಾತ ಸಾಹಿತಿಗಳು, ಕಲಾವಿದರು, ಹಿರಿಯ ಮುತ್ಸದ್ದಿಗಳು ಸಭೆ–ಸಮಾರಂಭಗಳ ಗಾಂಭೀರ್ಯವನ್ನು ಹೆಚ್ಚಿಸಿದ್ದಾರೆ, ತಮ್ಮ ಅಪಾರ ಮೆಚ್ಚುಗೆಯನ್ನು ಸೂಚಿಸಿ ಪ್ರೋತ್ಸಾಹಿಸಿದ್ದಾರೆ. ಸಾಂಸ್ಕೃತಿಕ ವಿಶಿಷ್ಟ ಕಾರ್ಯಕ್ರಮಗಳು ಪದೇ ಪದೇ ಮೆಲುಕು ಹಾಕುವಂತೆ ಎಲ್ಲರ ನೆನಪಿನಲ್ಲಿ ಉಳಿದುಕೊಂಡಿವೆ.

ಬಸವ ವೇದಿಕೆಯು ತನ್ನ ಬಹುಮುಖ್ಯ ಆಶಯದಂತೆ 1996ರಿಂದ ನಾಡಿನ ಸೇವಾ ಗಣ್ಯರಿಗೆ 'ಬಸವಶ್ರೀ' ಪ್ರಶಸ್ತಿಯನ್ನು ನೀಡುತ್ತಾ ಬರುತ್ತಿದೆ. 1997ರಿಂದ ಶರಣ ಸಾಹಿತ್ಯ, ಸಂಸ್ಕೃತಿಯ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಗಣ್ಯಾತಿಗಣ್ಯರನ್ನು ಗುರುತಿಸಿ 'ವಚನಸಾಹಿತ್ಯಶ್ರೀ' ಪ್ರಶಸ್ತಿಯನ್ನೂ ನೀಡಲು ತನ್ನ ಸಂಪ್ರದಾಯವನ್ನು ಇಮ್ಮಡಿಗೊಳಿಸಿಕೊಂಡಿದೆ.

ಬಸವ ವೇದಿಕೆಯ ಸ್ಥಾಪನೆಯ ಪ್ರಾರಂಭದ ವರ್ಷಗಳಲ್ಲಿ ನಮಗೆ ಮಾರ್ಗದರ್ಶನ ನೀಡಿದ ಮಾಜಿ ಸಚಿವರುಗಳಾದ ಶ್ರೀ ವಿ. ಸೋಮಣ್ಣನವರು ಹಾಗೂ ಶ್ರೀ ಬಸವರಾಜ ಬೊಮ್ಮಾಯಿಯವರು, ಪದ್ಮಶ್ರೀ ಲಿಂ. ಆರ್.ಎಂ.ಬಿ. ಆರಾಧ್ಯ, ಅವರುಗಳನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸುವುದು ನಮ್ಮ ಕರ್ತವ್ಯವಾಗಿದೆ.

ಬಸವ ವೇದಿಕೆಯ ಕಲಶಪ್ರಾಯವಾದ ಬಸವ ಜಯಂತಿ ಹಾಗೂ 'ಬಸವಶ್ರೀ', 'ವಚನಸಾಹಿತ್ಯಶ್ರೀ' ಪ್ರಶಸ್ತಿ ಪ್ರದಾನ ಸಮಾರಂಭಗಳ ದಿವ್ಯ ಸಾನಿಧ್ಯವನ್ನು ನಾಡಿನ ಹಿರಿಯ ಹರಗುರು ಚರಮೂರ್ತಿಗಳು ಕರುಣಿಸಿ ಸಮಾರಂಭಗಳನ್ನು ಪಾವನಗೊಳಿಸುತ್ತಾ ಬಂದಿದ್ದಾರೆ. ಪರಮಪೂಜ್ಯರುಗಳ ಮಾರ್ಗದರ್ಶನ ಹಾಗೂ ಆಶೀರ್ವಾದಗಳೇ ಬಸವ ವೇದಿಕೆಯ ಜೀವಾಳವಾಗಿ ಮುನ್ನಡೆಯುತ್ತಿದೆ. ನಾಡಿನ ಸಾಹಿತ್ಯ, ಸಂಸ್ಕೃತಿ ಜಗತ್ತಿನ ದಿಗ್ಗಜರ ಸಮಾವೇಶ ಸಮಾರಂಭದ ಸದಭಿರುಚಿಯನ್ನು ಸಾಕ್ಷೀಕರಿಸಿದೆ.

ಬಸವಶ್ರೀ ಪ್ರಶಸ್ತಿಯ ಪರಿಕಲ್ಪನೆಯನ್ನು ನಾಡಿಗೆ ಪ್ರಪ್ರಥಮವಾಗಿ ನೀಡಿದ ಹಿರಿಮೆ ನಮ್ಮ ಬಸವ ವೇದಿಕೆಗೆ ಸಲ್ಲುತ್ತದೆ. ನಮ್ಮ ವೇದಿಕೆಯು ಈ ಪ್ರಶಸ್ತಿಯನ್ನು ನೀಡಲು ಪ್ರಾರಂಭಿಸಿದ ಮೇಲೆ ನಾಡಿನ ಅನೇಕ ಮಠ ಮಾನ್ಯಗಳು ಈ ರೀತಿಯ ಪ್ರಶಸ್ತಿಗಳನ್ನು ನೀಡುವ ಪ್ರಯತ್ನವನ್ನು ಮಾಡುತ್ತಿವೆ. ಕರ್ನಾಟಕ ಸರ್ಕಾರ ಪ್ರಾರಂಭಿಸಿದ ಬಸವ ಪುರಸ್ಕಾರಕ್ಕೂ ನಮ್ಮ ಬಸವ ವೇದಿಕೆಯೇ ಮೂಲ ಪ್ರೇರಣೆ ನೀಡಿದೆ ಎಂದರೆ ಅತಿಶಯೋಕ್ತಿಯಲ್ಲ.

ಸರ್ಕಾರದ ಕಾರ್ಯದರ್ಶಿಯಂಥ ಉನ್ನತ ಸ್ಥಾನದಲ್ಲಿ ಸೇವೆ ಸಲ್ಲಿಸಿ ಕಳೆದ ಜೂನ್ 2014ರಲ್ಲಿ ನಿವೃತ್ತರಾದ ನಂತರ ಡಾ. ಸಿ. ಸೋಮಶೇಖರ ಅವರು ಸಾಹಿತ್ಯ, ಸಂಸ್ಕೃತಿ ಹಾಗೂ ಸಾಮಾಜಿಕ ಸೇವಾ ಕ್ಷೇತ್ರದಲ್ಲಿ ಮತ್ತಷ್ಟು ಕ್ರಿಯಾಶೀಲರಾಗಿ ತೊಡಗಿಸಿಕೊಳ್ಳುತ್ತಿರುವುದು ಅಭಿನಂದನೀಯ ಸಂಗತಿಯಾಗಿದೆ.

ಇತ್ತೀಚೆಗೆ ತಮ್ಮದೇ ಆದ "ಡಾ. ಸಿ. ಸೋಮಶೇಖರ–ಶ್ರೀಮತಿ ಎನ್. ಸರ್ವಮಂಗಳಾ ಸಾಹಿತ್ಯ ಸೇವಾ ಸಂಘ' ಎಂಬ ಸಾಂಸ್ಕೃತಿಕ ಸೇವಾ ಸಂಸ್ಥೆಯನ್ನು ಸ್ಥಾಪಿಸಿಕೊಂಡು ಅದರ ಮೂಲಕ ವಚನ ಸಾಹಿತ್ಯ, ದಾಸ ಸಾಹಿತ್ಯ, ಜಾನಪದ ಸಾಹಿತ್ಯ ಹಾಗು ಸಂಗೀತ ಕ್ಷೇತ್ರದಲ್ಲಿನ ಜೀವಮಾನ ಸಾಧನೆಗಾಗಿ ಹಿರಿಯ ಸಾಧಕರನ್ನು 'ಸಂಸ್ಕೃತಿ ಸಂಗಮ' ಪ್ರಶಸ್ತಿಯ ಮೂಲಕ ಗೌರವಿಸುವ ಉತ್ತಮ ಕಾರ್ಯಕ್ಕೆ ನಾಂದಿ ಹಾಡಿದ್ದಾರೆ. ವಚನ ಸಾಹಿತ್ಯ, ದಾಸ ಸಾಹಿತ್ಯ, ಜಾನಪದ ಸಾಹಿತ್ಯ ಹಾಗೂ ಸಂಗೀತ ಕ್ಷೇತ್ರಗಳಲ್ಲಿನ ತಮ್ಮ ಜೀವಮಾನ ಸಾಧನೆಗಾಗಿ 'ಸಂಸ್ಕೃತಿ ಸಂಗಮ' ಪ್ರಶಸ್ತಿಗಳನ್ನು ನೀಡಿ ಗೌರವಿಸಿರುವ ಅವರ ಸಂಸ್ಕೃತಿ ಪ್ರೇಮ ಅಭಿನಂದನಾರ್ಹವಾಗಿದೆ.

ಇಂದಿನ ಆಧುನಿಕ ಬದುಕು ಎದುರಿಸುತ್ತಿರುವ ಮೌಢ್ಯ ಹಾಗೂ ಸ್ವಾರ್ಥತೆಯನ್ನು ಪ್ರತಿರೋಧಿಸಲು ಬೇಕಾದ ಉತ್ತರ ಮತ್ತು ಸ್ಥೈರ್ಯಗಳನ್ನು ತುಂಬಿಕೊಡುವ ಮಾರ್ಗದಲ್ಲಿ ಬಸವ ವೇದಿಕೆಯು ನಿರಂತರವಾಗಿ ಪ್ರಯತ್ನಿಸುತ್ತಿದೆ. ಈ ಮಾರ್ಗದಲ್ಲಿ ಸಾಗುತ್ತಿರುವ ವೇದಿಕೆಯು ಸಕಲ ಶರಣ ಸಂಕುಲದ ನೆರವು, ಬೆಂಬಲ ಹಾಗೂ ಮಾರ್ಗದರ್ಶನಗಳನ್ನು ಸದಾ ನಿರೀಕ್ಷಿಸುತ್ತದೆ.

**ಶರಣು ಶರಣಾರ್ಥಿಗಳು.**

**ಜರಗನಹಳ್ಳಿ ಶಿವಶಂಕರ**
ಕಾರ್ಯದರ್ಶಿ

ಬೆಂಗಳೂರು
ದಿನಾಂಕ: 15–5–2016



**ಡಾ. ಸಿ. ಸೋಮಶೇಖರ,** ಐಎಎಸ್(ನಿ)
ಸಂಸ್ಥಾಪಕರು ಹಾಗೂ ಅಧ್ಯಕ್ಷರು
ಬಸವ ವೇದಿಕೆ, ಬೆಂಗಳೂರು

# ಪ್ರಸ್ತಾವನೆ

ಕಾಯಕ ಹಾಗೂ ದಾಸೋಹ ತತ್ವಗಳ ಮೂಲಕವೇ ಮನುಕುಲದ ಮಹತ್ವವನ್ನು ಎತ್ತಿ ಹಿಡಿದ ಶರಣ ಪರಂಪರೆಯು ಜಾತಿ ಮತ್ತು ವರ್ಗರಹಿತ ಸಮಾಜದ ಸ್ಥಾಪನೆಗಾಗಿ ಹನ್ನೆರಡನೆಯ ಶತಮಾನದಲ್ಲಿ ಮಾಡಿದ ಪ್ರಯತ್ನವು ಆಧುನಿಕ ಜಾಗತಿಕ ಇತಿಹಾಸದಲ್ಲೊಂದು ಮಹತ್ತರ ಅಧ್ಯಾಯ. ವಿಶ್ವಮಾನವ ಸಂತತಿಯು ಎಲ್ಲ ರೀತಿಯ ಭೇದ ಭಾವಗಳನ್ನು, ಅಸಮಾನತೆಗಳನ್ನು ತೊಡೆದುಹಾಕಿ ಸರ್ವಸಮಾನತೆ ಮತ್ತು ಸಹಬಾಳ್ವೆಗಳ ಬುನಾದಿಯ ಮೇಲೆ ಸುಂದರವೂ, ಸುಶೀಲವೂ ಆದ ಸಮೃದ್ಧ ಬದುಕನ್ನು ಸಮರ್ಥವಾಗಿ ಕಟ್ಟಿಕೊಂಡು ತನ್ಮೂಲಕ ಜನ್ಮವನ್ನು ಸಾರ್ಥಕಪಡಿಸಿಕೊಳ್ಳುವುದಕ್ಕಾಗಿ ಹಚ್ಚಿದ ಜಗತ್ತಿನ ಜ್ಯೋತಿಯೇ ಬಸವಜ್ಯೋತಿ, ವಚನಜ್ಯೋತಿ.

ವಿಶ್ವ ಭ್ರಾತೃತ್ವದ ನೆಲೆಗಟ್ಟಿನಲ್ಲಿ ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಸುಧಾರಣೆಯನ್ನು ಕಂಡುಕೊಳ್ಳಬೇಕಾದ ನಿಟ್ಟಿನಲ್ಲಿ ಬಸವಾದಿ ಶರಣರ ತತ್ವಸಿದ್ಧಾಂತಗಳು ಕ್ರಾಂತಿಕಾರಿ ಎನಿಸಿಕೊಳ್ಳುವಷ್ಟರ ಮಟ್ಟಿಗೆ ಸಾರ್ವಕಾಲಿಕವಾದ ಮಹತ್ವವನ್ನು ಪಡೆದುಕೊಂಡಿರುವ ದಾರಿದೀಪಗಳಾಗಿವೆ.

'ಸಕಲ ಜೀವಾತ್ಮರಿಗೂ ಲೇಸನೇ ಬಯಸುವ ಧರ್ಮ ಮಾನವ ಧರ್ಮ' ಎಂದು ಪ್ರತಿಪಾದಿಸಿದ ಬಸವಣ್ಣನವರು ಮುಂದುವರೆದು ಈ ಧರ್ಮದ ಮೂಲವೇ ದಯೆ, ದಯೆಯಿಲ್ಲದ ಧರ್ಮವೂ ಒಂದು ಧರ್ಮವೇ..?! ಎಂಬ ಸಾರ್ವತ್ರಿಕ ಸತ್ಯವನ್ನು ಮುಕ್ತವಾಗಿ ಸಾರಿ ಜಾತಿಮತಗಳಿಗೆ ಅತೀತವಾಗಿರುವ ಮಾನವ ಧರ್ಮವೇ ಸರ್ವಶ್ರೇಷ್ಠ ಎಂಬ ಸತ್ಯವನ್ನು ಸಾರುವ ಮೂಲಕ ತಾವು ಜೀವಿಸಿದ್ದ ಕಾಲಘಟ್ಟಕ್ಕಿಂತಲೂ ಶತಶತಮಾನಗಳಾಚೆಗೆ ಜಿಗಿದು ಶಾಶ್ವತವಾಗಿ ಜನಮಾನಸದಲ್ಲಿ ನೆಲೆಗೊಂಡುಬಿಟ್ಟರು.

ದಿನೇ ದಿನೇ ಸಂಕೀರ್ಣಗೊಳ್ಳುತ್ತಿರುವ ಮಾನವೀಯ ಭಾವನೆಗಳು, ವರ್ತನೆಗಳು ಮತ್ತು ಬಾಂಧವ್ಯಗಳನ್ನು ಪುನರುದ್ದೀಪನಗೊಳಿಸಿ ವಿಶ್ವವ್ಯಾಪಿಯಾಗಿ ಮನುಕುಲದ ಬದುಕನ್ನು ಸಹನೀಯವಾಗಿಸುವ ನಿಟ್ಟಿನಲ್ಲಿ ನಿರ್ಣಾಯಕ ಪಾತ್ರ ವಹಿಸಿರುವ ವಚನ ಸಾಹಿತ್ಯ ಮತ್ತು ಶರಣ ಸಾಹಿತ್ಯಗಳು ಸಮಾಜದ ಪುನರ್ನಿರ್ಮಾಣಕ್ಕೆ ಶರಣ ಪರಂಪರೆಯು ನಡೆಸಿದ ಬಹುದೊಡ್ಡ ಸಾಹಿತ್ಯಿಕ, ಸಾಮಾಜಿಕ ಕ್ರಾಂತಿಯೆನಿಸಿದ್ದು ಇಂದಿಗೂ ತನ್ನ ಪ್ರಭಾವವನ್ನು ಅಚ್ಚಳಿಯದೆ

*ಕಾರ್ತಿಕದ ಕತ್ತಲಲಿ ಆಕಾಶ ದೀಪವಾಗಿ*
*ನೀ ಬಂದೆ ಬಟ್ಟೆಗೆಟ್ಟವರಿಗೊಂದು ದೊಂದಿ ದಿಕ್ಕಾಗಿ*
*ಎಂಟು ಶತಮಾನಗಳ ಹಿಂದೆ,*
*ಅಗ್ನಿ ಖಡ್ಗವನಾಂತ ಓ ಅಧ್ಯಾತ್ಮ ಕ್ರಾಂತಿವೀರ,*
*ದೇವದಯೆಯೊಂದು ಹೇ ಧೀರಾವತಾರ*
*ಶ್ರೀ ಬಸವೇಶ್ವರಾ!*

ಉಳಿಸಿಕೊಂಡಿದೆ. ಹೀಗಾಗಿ ಬಸವಾದಿ ಶರಣರ ಜೀವವಾಣಿಯು ಇಡೀ ವಿಶ್ವದಲ್ಲಿ ಕನ್ನಡ ಭಾಷೆಯ ಅಕ್ಷರಗಳ ಮೂಲಕವೇ ಅಕ್ಷಯವಾಗಿದ್ದು ದಿನದಿಂದ ದಿನಕ್ಕೆ ಹೆಚ್ಚು ಹೆಚ್ಚು ಪ್ರಸ್ತುತವೂ ಆಪ್ತವೂ ಆಗುತ್ತಿದ್ದು ಅನುಭವ ಮತ್ತು ಅನುಭಾವಗಳ ಸಮತೋಲಿತ ಸಂಯೋಗದಿಂದಾಗಿ ಉನ್ನತ ಮಟ್ಟದ ಸತ್ಯ, ನ್ಯಾಯ ಧರ್ಮಗಳ ನೆಲೆಗಟ್ಟಿನಲ್ಲಿ ನೀತಿವಂತ ಬದುಕನ್ನು ಕಟ್ಟಿಕೊಳ್ಳಲು ಸರಳವಾದ, ಸುಲಭವಾದ ಮಾರ್ಗದರ್ಶಿಗಳಾಗಿ ಅಮರವಾಗಿವೆ.

ಬಸವಾದಿ ಶರಣರು ನಡೆಸಿದ ಕ್ರಾಂತಿ ಸಮಗ್ರವಾದುದು, ಮಾನವೀಯ ನೀತಿ ಸೂತ್ರಗಳ ಮೇಲೆ ಆಧಾರಿತವಾದುದು. ತಮ್ಮ ಅನುಭಾವದ ವಚನಗಳ ಮೂಲಕ ಇಡೀ ಮಾನವ ಸಮುದಾಯಕ್ಕೆ ಒಂದು ವಿಶಿಷ್ಟವಾದ ಜೀವನ ಸಂವಿಧಾನವನ್ನು ನೀಡಿದ ಹಿರಿಮೆ ಬಸವಣ್ಣ ಮತ್ತವರ ಸಮಕಾಲೀನ ಶರಣರಿಗೆ ಸಲ್ಲುತ್ತದೆ.

ಹನ್ನೆರಡನೆಯ ಶತಮಾನದ ಮಹಾನ್ ಕ್ರಾಂತಿ ಪುರುಷ ಬಸವಣ್ಣನವರ ಮತ್ತು ಶರಣರ ದಿವ್ಯಾದರ್ಶಗಳ ತತ್ವಸಿದ್ಧಾಂತಗಳ ಪ್ರಸಾರದ ಮೂಲಕ ನಾಡಿನ ಜನತೆಯಲ್ಲಿ ಬಸವಾದಿ ಶರಣರ ಚಿಂತನೆಯ ಬಗ್ಗೆ ಅರಿವು ಮತ್ತು ಜಾಗೃತಿ ಉಂಟು ಮಾಡಬೇಕೆಂಬ ಮಹತ್ವಾಕಾಂಕ್ಷೆಯಿಂದ ಪ್ರಾರಂಭವಾದ ಸಂಸ್ಥೆಯೇ ಬಸವ ವೇದಿಕೆ.

ಸುಂದರ, ಸಮೃದ್ಧ ಬದುಕಿನ ನಿರ್ಮಾಣಕ್ಕಾಗಿ ಅನುಭಾವದ ಅನುಸಂಧಾನದ ಮೂಲಕವಾಗಿ ಸರ್ವೋಚ್ಚ ಮಾರ್ಗವನ್ನು ತೆರೆದಿಟ್ಟಿರುವ ಬಸವಾದಿ ಶರಣರ ಪರಂಪರೆಯ ದಿವ್ಯಾದರ್ಶಗಳನ್ನು ಸಾಕಾರಗೊಳಿಸಿ ಅವರು ಹಚ್ಚಿಟ್ಟು ಹೋಗಿರುವ ಸುಜ್ಞಾನದ ದೀವಿಗೆಯನ್ನು ಅತ್ಯಂತ ಭಕ್ತಿಪೂರ್ವಕವಾಗಿ ತಲೆಮಾರಿನಿಂದ ತಲೆಮಾರಿಗೆ ಕೊಂಡೊಯ್ಯುವ ಹಂಬಲದಿಂದ 1991ರಲ್ಲಿ ಸಂಸ್ಥಾಪಿಸಲಾಗಿರುವ ನಮ್ಮ ಬಸವ ವೇದಿಕೆ ನಾಡಿನ ಒಂದು ಪ್ರತಿಷ್ಠಿತ ಸಂಸ್ಥೆಯಾಗಿ ಗುರುತಿಸಲ್ಪಟ್ಟಿರುವುದು ಹಾಗೂ ಈ ವರ್ಷ ವೇದಿಕೆಯ ರಜತೋತ್ಸವ ವರ್ಷವನ್ನಾಗಿ ಆಚರಿಸುವ ಸುಯೋಗವು ಪ್ರಾಪ್ತವಾಗಿರುವುದು ಹೆಮ್ಮೆಯ ವಿಷಯವಾಗಿದೆ.

ಕಳೆದ ಇಪ್ಪತ್ತಾರು ವರ್ಷಗಳಲ್ಲಿ ಬಸವ ವೇದಿಕೆಯು ನಾಡಿನ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆಯನ್ನು ಸಲ್ಲಿಸಿರುವ ಆದರ್ಶ ಗುಣವಂತರಿಗೆ, ಚಿಂತಕರಿಗೆ, ಸಾಹಿತಿಗಳಿಗೆ, ಸಂಶೋಧಕರಿಗೆ ಸಂಸ್ಕೃತಿ ಪ್ರವರ್ಧಕರಿಗೆ, ವಿದ್ವಜ್ಜನರಿಗೆ, ಶರಣ ಸಮಾಜಸೇವಕರಿಗೆ ಬಸವ ಜಯಂತಿಯ ಆಚರಣೆಯ

ದಿವ್ಯ ಸಂದರ್ಭದಲ್ಲಿ ಪ್ರತಿಷ್ಠಿತ 'ಬಸವಶ್ರೀ' ಮತ್ತು 'ವಚನ ಸಾಹಿತ್ಯಶ್ರೀ' ಪ್ರಶಸ್ತಿಗಳನ್ನು ನೀಡಿ ಗೌರವಿಸುವ ಮೂಲಕ ನಾಡಿನ ಸೇವಾ ಪರಂಪರೆಯು ಮುಂದಿನ ಹಲವಾರು ತಲೆಮಾರುಗಳಿಗೆ ಪ್ರೇರಣೆ ಮತ್ತು ಪೋಷಣೆ ನೀಡುವಂತ ಕೆಲಸವನ್ನು ಅತ್ಯಂತ ಗೌರವಪೂರ್ವಕವಾಗಿ ಅದ್ದೂರಿಯಿಂದ ಮಾಡಿಕೊಂಡು ಬರುತ್ತಿದೆ.

ಕಳೆದ ವರ್ಷ ಪ್ರತಿಷ್ಠಿತ 'ಬಸವಶ್ರೀ' ಪ್ರಶಸ್ತಿಯನ್ನು ಕನ್ನಡ ಸಾರಸ್ವತ ಲೋಕದ ಅಪೂರ್ವ ಪ್ರತಿಭೆಯಾಗಿರುವ ಶತಾಯುಷಿ ನಾಡೋಜ ಡಾ. ಜಿ. ವೆಂಕಟಸುಬ್ಬಯ್ಯನವರಿಗೂ, 'ವಚನಸಾಹಿತ್ಯಶ್ರೀ' ಪ್ರಶಸ್ತಿಯನ್ನು ಸಂವೇದನಾಶೀಲ ಕವಿ ಶ್ರೀ ಕೆ.ಸಿ. ಶಿವಪ್ಪನವರು ಮತ್ತು ನಾಡಿನ ಪ್ರಸಿದ್ಧ ಹಿಂದೂಸ್ತಾನಿ ಗಾಯಕಿಯಾಗಿರುವ ಶ್ರೀಮತಿ ಸಂಗೀತ ಕಟ್ಟಿಯವರಿಗೂ ನೀಡಿ ಗೌರವಿಸಲಾಗಿದೆ.

ಈ ವರ್ಷದ 'ಬಸವಶ್ರೀ' ಪ್ರಶಸ್ತಿಯನ್ನು ನಾಡಿನ ಪತ್ರಿಕೋದ್ಯಮ ಹಾಗೂ ಸಾರಿಗೆ ಕ್ಷೇತ್ರದ ಸುಪ್ರಸಿದ್ಧ ಉದ್ಯಮಿಗಳಾಗಿರುವ ಮಹಾನ್ ಸಾಧಕರಾದ ಡಾ. ವಿಜಯ ಸಂಕೇಶ್ವರ ಅವರಿಗೆ 'ವಚನಸಾಹಿತ್ಯಶ್ರೀ' ಪ್ರಶಸ್ತಿಯನ್ನು ನಾಡಿನ ಶ್ರೇಷ್ಠ ಶಿಕ್ಷಕ, ಲೇಖಕ, ಸಂಶೋಧಕ ಪ್ರೊ. ಜಿ.ಹೆಚ್. ಹನ್ನೆರಡುಮಠ ಮತ್ತು ಪ್ರಸಿದ್ಧ ಶಿಕ್ಷಕಿ, ಅನುಭಾವಿ ಲೇಖಕಿ ಡಾ. ಮಂಗಳಾ ಪ್ರಿಯದರ್ಶಿನಿ ಅವರುಗಳಿಗೆ ನೀಡಿ ಗೌರವಿಸಲಾಗುತ್ತಿದೆ.

ಈ ಪ್ರಶಸ್ತಿಗಳ ಮೂಲ ಕಲ್ಪನೆಯನ್ನು ಪ್ರಪ್ರಥಮವಾಗಿ ನಾಡಿಗೆ ನೀಡಿದ ಹಿರಿಮೆಯು ನಮ್ಮ ವೇದಿಕೆಯದಾಗಿದ್ದು ಇದರ ಸ್ಫೂರ್ತಿ ಹಾಗೂ ಪ್ರೇರಣೆಯಿಂದಾಗಿ ರಾಜ್ಯದಾದ್ಯಂತ ಇಂತಹ ಇನ್ನಷ್ಟು ಹಲವಾರು ಪ್ರತಿಷ್ಠಿತ ಪ್ರಶಸ್ತಿಗಳು ಸಂಸ್ಥಾಪಿಸಲ್ಪಟ್ಟಿರುವುದು ನಮಗೆ ಅತ್ಯಂತ ಹೆಮ್ಮೆ ಹಾಗೂ ಅಭಿಮಾನವನ್ನು ಉಂಟುಮಾಡಿದೆ. ಮನುಕುಲದಲ್ಲಿ ಮಹದೇವನನ್ನು ಕಂಡ ಮಹಾನುಭಾವ ಬಸವಣ್ಣನವರ ಹೆಸರಿನಲ್ಲಿ ಎಷ್ಟೆಷ್ಟು ಪ್ರಶಸ್ತಿಗಳು ಪ್ರದಾನವಾದರೂ ಅವೆಲ್ಲವೂ ನಮಗೆ ಸಂತೋಷವೇ!

ಪ್ರತಿಷ್ಠಿತ 'ಬಸವಶ್ರೀ' 'ವಚನ ಸಾಹಿತ್ಯಶ್ರೀ' ಪುರಸ್ಕೃತರುಗಳ ಸಾಧನೆಯ ಕಿರು ದರ್ಶನ ಮಾಡಿಸುವುದೇ ಈ ವಿಶಿಷ್ಟ ಸಂಚಿಕೆಯ ಪ್ರಕಟಣೆಯ ಪ್ರಯತ್ನ. ಶರಣರ ಚಿಂತನೆಗಳ ಬಗ್ಗೆ ಹೆಚ್ಚಿನ ಆಸಕ್ತಿ ಮೂಡಿಸುವುದರ ಜೊತೆಗೆ ವಚನ ಸಾಹಿತ್ಯ ಹಾಗೂ ಶರಣರ ತತ್ವ ದರ್ಶನಗಳ ಬಗ್ಗೆ ಅರಿವನ್ನು ಬೆಳಗಿಸಿ, ಈ ಎಲ್ಲ ಸಾಧಕರುಗಳ ಅಖಂಡ ಚೈತನ್ಯವು ಇಂಥದೊಂದು ಸಾಧನೆಯನ್ನು

ಸಾಧ್ಯವಾಗಿಸಿಕೊಳ್ಳುವ ನಿಟ್ಟಿನಲ್ಲಿ ನಿಮಗೆಲ್ಲರಿಗೂ ದಿವ್ಯ ಸ್ಫೂರ್ತಿಯನ್ನು ನೀಡುವಂತಾಗಲಿ ಎಂದು ಹಾರೈಸುತ್ತೇವೆ.

ಸುಮಾರು ನಾಲ್ಕು ದಶಕಗಳ ಕಾಲ ಸರ್ಕಾರದ ವಿವಿಧ ಇಲಾಖೆಗಳಲ್ಲಿ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತಿಯಾಗಿರುವ ನನಗೆ ಸಾಹಿತ್ಯ, ಸಂಸ್ಕೃತಿ, ಕಲೆಗಳ ಅಭಿರುಚಿ ಬಾಲ್ಯದಿಂದಲೇ ಮೂಡಿಬಂದಿದ್ದು ನನ್ನ ಬದುಕಿನ ಸೌಭಾಗ್ಯವೇ ಎಂದು ಭಾವಿಸಿರುತ್ತೇನೆ. ವಿದ್ಯಾರ್ಥಿ ದೆಸೆಯಿಂದಲೂ ಸಾಹಿತ್ಯ, ಸಂಸ್ಕೃತಿ, ಕಲೆಗಳ ಸೇವಾದೀಕ್ಷೆಯನ್ನು ಪಡೆದುಕೊಂಡಿದ್ದ ನನಗೆ ನನ್ನ ಆಡಳಿತಾತ್ಮಕ ಕಾರ್ಯ ನಿರ್ವಹಣೆಯ ಸಂದರ್ಭದಲ್ಲಿ ಮಾರ್ಗದರ್ಶನ ನೀಡಿದ್ದು ಈ ಸಾಹಿತ್ಯಿಕ ಚಿಂತನೆಯ ಅನುಭಾವದ ಮೂಸೆಯಲ್ಲಿ ಮೂಡಿಬಂದ ಮಾನವೀಯ ಸಂವೇದನೆಯೇ ಎಂದರೆ ಅತಿಶಯೋಕ್ತಿಯಲ್ಲ. ವಿಶೇಷವಾಗಿ ಕನ್ನಡ ಸಾಹಿತ್ಯ ಅದರಲ್ಲಿಯೂ ವಿಶೇಷವಾಗಿ ವಚನ ಸಾಹಿತ್ಯ ನನ್ನ ಆಡಳಿತ ಕ್ಷೇತ್ರದ ಕಾರ್ಯ ನಿರ್ವಹಣೆಯಲ್ಲಿ ದಾರಿದೀಪವಾಗಿ ಕೈಹಿಡಿದು ನನ್ನ ಆಡಳಿತ ಬದುಕು ಯಶಸ್ವಿಯಾಗಲು ಮೂಲ ಪ್ರೇರಣೆಯಾಯಿತು ಎಂಬುದು ಸತ್ಯ. ನನ್ನ ಮುಂದಿನ ಕಾಲಾವಧಿಯಲ್ಲಿ ಇದುವರೆವಿಗೂ ನಾನು ನಡೆಸಿಕೊಂಡು ಬಂದಿರುವ ಸಮಾಜಮುಖಿಯಾದ ಸಾಹಿತ್ಯಿಕ, ಸಾಮಾಜಿಕ, ಸಾಂಸ್ಕೃತಿಕ ಸೇವೆಯಲ್ಲಿ ಮತ್ತಷ್ಟು ಕ್ರಿಯಾಶೀಲವಾಗಿ ಮುಂದುವರೆಯಲು ಬಸವಾದಿ ಶರಣರು ನನ್ನನ್ನು ಕೈಹಿಡಿದು ಮುನ್ನಡೆಸಲೆಂದು ಹೃತ್ಪೂರ್ವಕವಾಗಿ ಹಂಬಲಿಸುತ್ತೇನೆ.

ವಿಶ್ವದ ಅತಿ ಶ್ರೇಷ್ಠ ದಾರ್ಶನಿಕ ಸಂತ, ಕಾಯಕಯೋಗಿ, ಪರಮದಾಸೋಹಿ, ಭಕ್ತಿ ಭಂಡಾರಿ ಬಸವಣ್ಣನವರ ದಿವ್ಯ ಜಯಂತಿಯ ಶುಭ ಸಂದರ್ಭದಲ್ಲಿ ಈ ನಮ್ಮ ಸತ್ಕಾರ್ಯದಲ್ಲಿ ಸಹಕಾರ, ಸಹಯೋಗ ನೀಡುತ್ತಿರುವ ಎಲ್ಲ ಬಂಧುಗಳಿಗೆ ನಮ್ಮ ಶುದ್ಧಾಂತಃಕರಣದ ಪ್ರಣಾಮಗಳನ್ನು ಸಲ್ಲಿಸಬಯಸುತ್ತೇನೆ.

**ಶರಣು ಶರಣಾರ್ಥಿಗಳು**

ಬೆಂಗಳೂರು
ದಿನಾಂಕ: 15–5–2016

## 'ಬಸವಶ್ರೀ'–1996

**ಪ್ರಪ್ರಥಮ ಪ್ರಶಸ್ತಿ ಪುರಸ್ಕೃತರು**
**ಡಾ. ಬಿ.ಡಿ. ಜತ್ತಿಯವರು**







## ‘ಬಸವಶ್ರೀ’–1997
ಶ್ರೀ ಎಸ್. ನಿಜಲಿಂಗಪ್ಪನವರು







## ‘ವಚನ ಸಾಹಿತ್ಯಶ್ರೀ’–1997
ಡಾ. ಸಿ.ಪಿ. ಕೃಷ್ಣಕುಮಾರ್‌ರವರು

**‘ಬಸವಶ್ರೀ’–1998**
**ಡಾ. ಎಂ.ಸಿ. ಮೋದಿಯವರು**








**‘ವಚನ ಸಾಹಿತ್ಯಶ್ರೀ’–1998**
**ಡಾ. ಎಸ್. ವಿದ್ಯಾಶಂಕರ್‌ರವರು**

## ‘ಬಸವಶ್ರೀ’–1999
ಶ್ರೀ ಕೆ.ಎಂ. ನಂಜಪ್ಪನವರು








## ‘ವಚನ ಸಾಹಿತ್ಯಶ್ರೀ’–1999
ಡಾ. ಎಂ. ಚಿದಾನಂದಮೂರ್ತಿಯವರು

## ‘ಬಸವಶ್ರೀ’–2000
ಡಾ. ದೇ. ಜವರೇಗೌಡರವರು







## ‘ವಚನ ಸಾಹಿತ್ಯಶ್ರೀ’–2000
ಪ್ರೊ. ಟಿ.ಆರ್. ಮಹಾದೇವಯ್ಯನವರು
ವಿದ್ವಾನ್ ಎಂ. ಶಿವಕುಮಾರಸ್ವಾಮಿಯವರು

## ‘ಬಸವಶ್ರೀ’–2001
ಡಾ. ಎಚ್. ನರಸಿಂಹಯ್ಯನವರು







## ‘ವಚನ ಸಾಹಿತ್ಯಶ್ರೀ’–2001
ಡಾ. ಎಸ್.ಆರ್. ಗುಂಜಾಳ್‌ರವರು

## ‘ಬಸವಶ್ರೀ’–2002
**ನ್ಯಾಯಮೂರ್ತಿ ಡಾ. ಶಿವರಾಜ ವಿ. ಪಾಟೀಲ್‌ರವರು**








## ‘ವಚನ ಸಾಹಿತ್ಯಶ್ರೀ’–2002
**ಶ್ರೀ ರಂಜಾನ್ ದರ್ಗಾರವರು**

## 'ಬಸವಶ್ರೀ'–2003
ಡಾ. ಚಂದ್ರಶೇಖರ ಕಂಬಾರ







## 'ವಚನ ಸಾಹಿತ್ಯಶ್ರೀ'–2003
ಡಾ. ಶೈಲಜಾ ಉಡಚಣರವರು

## ‘ಬಸವಶ್ರೀ’–2004
**ಡಾ. ಡಿ.ಎಂ. ನಂಜುಂಡಪ್ಪನವರು**








## ‘ವಚನ ಸಾಹಿತ್ಯಶ್ರೀ’–2004
**ಡಾ. ಸಾ.ಶಿ. ಮರುಳಯ್ಯನವರು**

## ‘ಬಸವಶ್ರೀ’–2005
**ಡಾ. ಪಾಟೀಲ ಪುಟ್ಟಪ್ಪನವರು**







## ‘ವಚನ ಸಾಹಿತ್ಯಶ್ರೀ’–2005
**ಶ್ರೀ ಇಬ್ರಾಹೀಮ ನ. ಸುತಾರರವರು**

## ‘ಬಸವಶ್ರೀ’–2006
ನ್ಯಾಯಮೂರ್ತಿ ಡಾ. ವಿ.ಎಸ್. ಮಳಿಮಠರವರು







## ‘ವಚನ ಸಾಹಿತ್ಯಶ್ರೀ’–2006
ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್‌ರವರು
ಡಾ. ಅಜಯ ಕುಮಾರ ಸಿಂಹರವರು

## ‘ಬಸವಶ್ರೀ’–2007
ಪದ್ಮಶ್ರೀ ಡಾ. ಎಸ್.ಪಿ. ಬಾಲಸುಬ್ರಹ್ಮಣ್ಯಂರವರು







## ‘ವಚನ ಸಾಹಿತ್ಯಶ್ರೀ’–2007
ವಾಙ್ಮಯ ತಪಸ್ವಿ ಶ್ರೀ ಕುಮಾರ ನಿಜಗುಣರವರು

## 'ಬಸವಶ್ರೀ'–2008
ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪನವರು







## 'ವಚನ ಸಾಹಿತ್ಯಶ್ರೀ'–2008
ಡಾ. ಜಯಶ್ರೀ ದಂಡೆಯವರು

## ‘ಬಸವಶ್ರೀ’–2009
**ಡಾ. ವೀರೇಂದ್ರ ಹೆಗ್ಗಡೆಯವರು**







## ‘ವಚನ ಸಾಹಿತ್ಯಶ್ರೀ’–2009
**ಪಂ. ವೆಂಕಟೇಶ ಕುಮಾರ್‌ರವರು**

## 'ಬಸವಶ್ರೀ'–2010
**ಡಾ. ಸುಧಾಮೂರ್ತಿಯವರು**







## 'ವಚನ ಸಾಹಿತ್ಯಶ್ರೀ'–2010
**ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯವರು**

## 'ಬಸವಶ್ರೀ'–2011
**ನಾಡೋಜ ಏಣಗಿ ಬಾಳಪ್ಪನವರು**







## 'ವಚನ ಸಾಹಿತ್ಯಶ್ರೀ'–2011
**ಡಾ. ವೀಣಾ ಬನ್ನಂಜೆಯವರು**

## 'ಬಸವಶ್ರೀ'–2012
**ನಾಡೋಜ ಡಾ. ಚನ್ನವೀರ ಕಣವಿಯವರು**







## 'ವಚನ ಸಾಹಿತ್ಯಶ್ರೀ'–2012
**ಶ್ರೀಮತಿ ಕಸ್ತೂರಿ ಶಂಕರ್‌ರವರು**

## ‘ಬಸವಶ್ರೀ’–2013
ಡಾ. ಎಂ.ಎಂ. ಕಲಬುರ್ಗಿಯವರು







## ‘ವಚನ ಸಾಹಿತ್ಯಶ್ರೀ’–2013
ಡಾ. ಜಿ.ವಿ. ಜಯಾ ರಾಜಶೇಖರ್‌ರವರು

## 'ಬಸವಶ್ರೀ'–2014
### ಭಾರತ ರತ್ನ ಡಾ. ಸಿ.ಎನ್.ಆರ್. ರಾವ್





## 'ವಚನಸಾಹಿತ್ಯಶ್ರೀ'–2014
**ಡಾ. ಲತಾ ರಾಜಶೇಖರ್**





## 'ವಚನ ಸಾಹಿತ್ಯಶ್ರೀ'–2014
**ಡಾ. ಆರ್. ಶಿವಣ್ಣ**



‘ಬಸವಶ್ರೀ’ ಹಾಗೂ ‘ವಚನಸಾಹಿತ್ಯಶ್ರೀ’ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಗಣ್ಯರು

‘ಬಸವ ಜ್ಯೋತಿ’–2015
ಕೃತಿ ಬಿಡುಗಡೆ

‘ಬಸವಶ್ರೀ’–2015 ಪುರಸ್ಕೃತರು
ನಾಡೋಜ ಡಾ. ಜಿ. ವೆಂಕಟಸುಬ್ಬಯ್ಯ





‘ವಚನ ಸಾಹಿತ್ಯಶ್ರೀ’–2015
ಶ್ರೀ ಕೆ.ಸಿ. ಶಿವಪ್ಪನವರು
ಪ್ರಖ್ಯಾತ ಸಾಹಿತಿಗಳು

‘ವಚನ ಸಾಹಿತ್ಯಶ್ರೀ’–2015
ಶ್ರೀಮತಿ ಸಂಗೀತ ಕಟ್ಟಿ
ಪ್ರಖ್ಯಾತ ಹಿಂದೂಸ್ತಾನಿ ಗಾಯಕಿ



‘ಬಸವಶ್ರೀ’ ಹಾಗೂ ‘ವಚನಸಾಹಿತ್ಯಶ್ರೀ’ ಪ್ರಶಸ್ತಿ 2016 ಪ್ರದಾನ ಸಮಾರಂಭದಲ್ಲಿ ಗಣ್ಯರು

## ಬಸವ ವೇದಿಕೆ
ಬೆಂಗಳೂರು



## ‘ಬಸವಶ್ರೀ’–2016
## ಪ್ರಶಸ್ತಿ ಪುರಸ್ಕೃತರು
## ಡಾ. ವಿಜಯ ಸಂಕೇಶ್ವರ ಅವರು

ನೀನೊಲಿದಡೆ ಕೊರಡು ಕೊನರುವುದಯ್ಯಾ । ನೀನೊಲಿದಡೆ ಬರಡು ಹಯನಹುದಯ್ಯಾ । ನೀನೊಲಿದಡೆ ವಿಷವೆಲ್ಲ ಅಮೃತವಹುದಯ್ಯಾ । ನೀನೊಲಿದಡೆ ಸಕಲ ಪಡಿಪದಾರ್ಥ । ಇದಿರಲ್ಲಿರ್ಪುವು ಕೂಡಲಸಂಗಮದೇವಾ ಎಂಬ ಮಹಾಮಾನವತಾವಾದಿ ಬಸವಣ್ಣನವರ ವಚನದ ಆಶಯಕ್ಕೆ ಸಾಕ್ಷಿಯಾದಂತಹ ಆದರ್ಶ ವ್ಯಕ್ತಿತ್ವ ಸನ್ಮಾನ್ಯ ಡಾ. ವಿಜಯ ಸಂಕೇಶ್ವರ ಅವರದು. ‘ಕಾಯಕವೇ ಕೈಲಾಸ’ ಎಂಬ ಶರಣರ ಸಂದೇಶದಂತೆ ಕಾಯಕ ಯೋಗಿಗಳಾಗಿ ಸಹಸ್ರಾರು ಶ್ರಮಿಕ ಬಂಧುಗಳಿಗೆ ಬದುಕನ್ನು ಕಟ್ಟಿಕೊಟ್ಟಂತಹ ಕಾಯಕರತ್ನ ಡಾ. ವಿಜಯ ಸಂಕೇಶ್ವರ ಅವರು.

ಶ್ರೀ ವಿಜಯ ಸಂಕೇಶ್ವರ ಅವರದು ಹೋರಾಟದ ಬದುಕು, ಸಾಧನೆಯ ಬೆಳಕು. 1950ರ ಆಗಸ್ಟ್ 2ರಂದು ಕರ್ನಾಟಕದ ಗದಗದಲ್ಲಿ ಅವರ ಜನನ. ಕರ್ನಾಟಕ ವಿಶ್ವವಿದ್ಯಾನಿಲಯದಿಂದ ವಾಣಿಜ್ಯಶಾಸ್ತ್ರದಲ್ಲಿ ಪದವಿ ಪ್ರಾಪ್ತಿ. ಹದಿನಾರರ ಹರೆಯದಲ್ಲಿಯೇ ಪ್ರಿಂಟಿಂಗ್ ಪ್ರೆಸ್ ಕಾಯಕ. 1976ರಲ್ಲಿ ವೃತ್ತಿಯ ಕ್ಷೇತ್ರ ಬದಲಾವಣೆ, ಸಾರಿಗೆ ಕ್ಷೇತ್ರಕ್ಕೆ ಪದಾರ್ಪಣೆ. ಒಂದೇ ಒಂದು ಲಾರಿಯ ಮೂಲಕ ಪ್ರಾರಂಭವಾದ ವಿಜಯಾನಂದ ರೋಡ್ ಲೈನ್ಸ್ ಸಂಸ್ಥೆ ತದನಂತರ ವಿಜಯಾನಂದ ರೋಡ್ ಲೈನ್ಸ್ ಲಾಜಿಸ್ಟಿಕ್ ಲಿಮಿಟೆಡ್ ಆಗಿ ಹಿಮಾಲಯ ಸದೃಶವಾದ ಸಂಸ್ಥೆಯಾಗಿ ಬೆಳೆದದ್ದು ಮಹತ್ತರ ಅಧ್ಯಾಯ. ಪವಾಡ ಸದೃಶವಾಗಿ ಅಭಿವೃದ್ಧಿ ಹೊಂದಿದ ಬೃಹತ್ ಸಂಸ್ಥೆಯಲ್ಲಿಂದು ನಾಲ್ಕು ಸಾವಿರ ಲಾರಿ, ಸುಮಾರು ಐನೂರು ಪ್ರವಾಸಿ ಬಸ್‌ಗಳಿದ್ದು, ಇಂಥದೊಂದು ಮಹಾನ್ ಸಂಸ್ಥೆಯ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿರುವ ಡಾ. ವಿಜಯ ಸಂಕೇಶ್ವರ ಅವರು ನಾಡಿನ ಮತ್ತು ರಾಷ್ಟ್ರದ ಸಾರಿಗೆ ಕ್ಷೇತ್ರದ ಭೀಷ್ಮರಾಗಿದ್ದಾರೆ.

ಪ್ರವಾಸಿ ಮತ್ತು ಸರಕು ಸಾಗಾಣಿಕೆ ವಾಹನಗಳ ಮೂಲಕ ಕೊರಿಯರ್ ಸೇವೆಯೂ ಒಳಗೊಂಡಂತೆ ವಿಭಿನ್ನ ರೀತಿಯ ಸಾರಿಗೆ ಉದ್ಯಮದ ಒಂದು ಅದ್ವಿತೀಯ ಸಾರಿಗೆ ಸಂಸ್ಥೆ ಇದಾಗಿದ್ದು ಇಂದು ಈ ಸಂಸ್ಥೆ ರಾಷ್ಟ್ರದಾದ್ಯಂತ ಸುಮಾರು ಒಂದು ಸಾವಿರ ಶಾಖೆಗಳನ್ನು ಹೊಂದಿದೆ. ಇಪ್ಪತ್ತು ಸಾವಿರ ಉದ್ಯೋಗಿಗಳ ಸಹಕಾರದಿಂದ ಸುಮಾರು ಒಂದು ಸಾವಿರದ ಐದು ನೂರು ಕೋಟಿ ರೂಪಾಯಿಗಳ

ವಾರ್ಷಿಕ ವಹಿವಾಟನ್ನು ಹೊಂದಿರುವ ಈ ಸಂಸ್ಥೆ ಇಡೀ ಏಷ್ಯಾ ಖಂಡದಲ್ಲಿಯೇ ಬೃಹತ್ ಸಾರಿಗೆ ಕ್ಷೇತ್ರದ ಒಂದು ಬಹುದೊಡ್ಡ ಸಂಸ್ಥೆಯಾಗಿ ಬೃಹದಾಕಾರವಾಗಿ ಬೆಳೆದಿರುವುದು ಡಾ. ವಿಜಯ ಸಂಕೇಶ್ವರ ಅವರ ಕಾರ್ಯಕ್ಷಮತೆ, ದಕ್ಷತೆ, ಶಿಸ್ತು ಹಾಗೂ ದೂರದರ್ಶಿತ್ವಗಳಿಗೆ ಸಾಕ್ಷಿಯಾಗಿದೆ.

ಕೇವಲ ಸಾರಿಗೆ ಕ್ಷೇತ್ರಕ್ಕೆ ಮಾತ್ರ ಮೀಸಲಾದ ಸಾಧನೆ ಅವರದಾಗಿರದೆ ಕನ್ನಡ ನಾಡಿನ ಪತ್ರಿಕಾ ಪ್ರಪಂಚಕ್ಕೆ ಅವರು ನೀಡಿರುವ ಕೊಡುಗೆಯು ಅಪಾರವಾಗಿದೆ. ಮೊದಲು 'ವಿಜಯ ಕರ್ನಾಟಕ' ದಿನಪತ್ರಿಕೆಯನ್ನು ಸ್ಥಾಪಿಸಿ ಯಶಸ್ವಿಯಾಗಿ, ಇದೀಗ 'ವಿಜಯವಾಣಿ' ಪತ್ರಿಕೆಯ ರೂವಾರಿಗಳೂ ಆಗಿರುವ ಶ್ರೀ ವಿಜಯ ಸಂಕೇಶ್ವರ ಅವರ ರಾಜಕೀಯ ಕ್ಷೇತ್ರದ ಸಾಧನೆಯೂ ಎಲ್ಲರು ಹೆಮ್ಮೆಪಡುವಂತಿದೆ.

ಧಾರವಾಡ ಉತ್ತರ ಲೋಕಸಭಾ ಕ್ಷೇತ್ರದಿಂದ ಮೂರು ಬಾರಿ ಲೋಕಸಭಾ ಸದಸ್ಯರಾಗಿ, ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸಿದ ಶ್ರೀಯುತರದು ಅನೇಕ ಸಾಮಾಜಿಕ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವ ಬಹುಮುಖ ಸೇವಾ ವ್ಯಕ್ತಿತ್ವ. ಇವರ ವಾಣಿಜ್ಯಕ್ಷೇತ್ರದ, ಸಾಮಾಜಿಕ ಕ್ಷೇತ್ರದ ಸೇವೆಯನ್ನು ಪರಿಗಣಿಸಿ ವಿವಿಧ ಪ್ರತಿಷ್ಠಿತ ರಾಷ್ಟ್ರೀಯ, ಅಂತರರಾಷ್ಟ್ರೀಯ ಸಂಸ್ಥೆಗಳು ನೀಡಿರುವ ಪದವಿ, ಪ್ರಶಸ್ತಿಗಳು ಲೆಕ್ಕವಿಲ್ಲದಷ್ಟು.

ಉದ್ಯೋಗ ರತ್ನ, ಸಾರಿಗೆ ರತ್ನ, ಸಾರಿಗೆ ಸಾಮ್ರಾಟ್, ಉದ್ಯಮ ರತ್ನ, ಚಾಣಕ್ಯ ಮುಂತಾದ ನೂರಾರು ರಾಷ್ಟ್ರೀಯ ಪ್ರಶಸ್ತಿಗಳೊಂದಿಗೆ, ಅಮೇರಿಕಾ, ಫ್ರಾನ್ಸ್, ಸಿಂಗಾಪುರ್ ಮುಂತಾದ ರಾಷ್ಟ್ರಗಳ ಹಲವಾರು ಪ್ರತಿಷ್ಠಿತ ಅಂತರರಾಷ್ಟ್ರೀಯ ಪ್ರಶಸ್ತಿಗಳನ್ನೂ ಸಾರಿಗೆ ಕ್ಷೇತ್ರದಲ್ಲಿನ ವಿಶಿಷ್ಟ ಸಾಧನೆಗಾಗಿ ಪಡೆದುಕೊಂಡಿದ್ದಾರೆ. ಹಾಗೆಯೇ ಪತ್ರಿಕಾ ಕ್ಷೇತ್ರಕ್ಕೆ ಸಂಬಂಧಿಸಿದಂತೆಯೂ ಅವರಿಗೆ ಹಲವಾರು ಪ್ರಶಸ್ತಿಗಳು ಸಂದಿವೆ.

2014ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯವು ಅವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ. ಅವರ ಪತ್ನಿ ಶ್ರೀಮತಿ ಲಲಿತ ಸಂಕೇಶ್ವರ ಅವರು ಪತಿಯ ಸಾಧನೆಯ ಹಿಂದಿನ ಸ್ಫೂರ್ತಿಯಾಗಿದ್ದಾರೆ. ಮೂರು ಜನ ಪುತ್ರಿಯರು ಮತ್ತು

ಒಬ್ಬ ಪುತ್ರನನ್ನು ಹೊಂದಿರುವ ಇವರದು ಅನುರೂಪ ದಾಂಪತ್ಯ. ಪುತ್ರ ಶ್ರೀ ಆನಂದ ಸಂಕೇಶ್ವರ್ ಸಹ ತಂದೆಯ ಸಾಹಸದ ಹಾದಿಯಲ್ಲಿಯೆ ಸಾಗುತ್ತಿರುವ ಯುವ ಸಾಧಕರಾಗಿದ್ದಾರೆ.

ಒಬ್ಬ ವ್ಯಕ್ತಿ ತನ್ನ ಪ್ರಾಮಾಣಿಕ ದುಡಿಮೆ, ಕಾಯಕ ನಿಷ್ಠೆ ಹಾಗೂ ನಿರಂತರ ಶ್ರದ್ಧೆಯಿಂದ ಎಂತಹ ಉನ್ನತ ಸಾಧನೆಯನ್ನು ಮಾಡಬಹುದು ಎಂಬುದಕ್ಕೆ ಡಾ. ವಿಜಯ ಸಂಕೇಶ್ವರರು ಸಾರ್ವಕಾಲಿಕ ಜೀವಂತ ಸಾಕ್ಷಿಯಾಗಿದ್ದಾರೆ, ಮಾದರಿಯಾಗಿದ್ದಾರೆ.

'ಮೃದು ವಚನಗಳೇ ಸಕಲ ಜಪಂಗಳಯ್ಯ, ಸದುವಿನಯವೆ ಸದಾಶಿವನ ಒಲುಮೆಯಯ್ಯ' ಎಂಬ ಶರಣರ ವಾಣಿಯಂತೆ ಸರಳತೆ, ಸಜ್ಜನಿಕೆ ಹಾಗೂ ವಿನಯಶೀಲತೆಗಳಂತಹ ಶರಣರ ಆದರ್ಶಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ತಮ್ಮ ಕಾರ್ಯಕ್ಷೇತ್ರದಲ್ಲಿ ವಿಜಯದ ಪತಾಕೆಯನ್ನೇ ಹಾರಿಸಿರುವ ಕಾಯಕ ರತ್ನ ಡಾ. ವಿಜಯ ಸಂಕೇಶ್ವರ ಅವರಿಗೆ ಇಂದು ಅವರ ವಿಶಿಷ್ಟ ಸಾಧನೆಯನ್ನು ಗುರುತಿಸಿ ಬಸವ ವೇದಿಕೆಯು ಪ್ರತಿಷ್ಠಿತ **'ಬಸವಶ್ರೀ'** ಪ್ರಶಸ್ತಿಯನ್ನು ಇಂದು ನೀಡಿ ಗೌರವಿಸುತ್ತಿದೆ. ಶ್ರೀಯುತರ ಸಾಧನೆ ರಾಷ್ಟ್ರೀಯ ಆದರ್ಶವಾಗಿ ಚಿರಕಾಲ ಬೆಳಗಿರಲೆಂಬುದೇ ನಮ್ಮ ಹಾರೈಕೆಯಾಗಿದೆ.

ದಿನಾಂಕ: 15–5–2016
ಸ್ಥಳ : ಬೆಂಗಳೂರು

**ಡಾ. ಸಿ. ಸೋಮಶೇಖರ,** ಐಎಎಸ್(ನಿ)
ಅಧ್ಯಕ್ಷರು ಬಸವ ವೇದಿಕೆ ಹಾಗೂ ಪದಾಧಿಕಾರಿಗಳು

## ಬಸವ ವೇದಿಕೆ
ಬೆಂಗಳೂರು



### 'ವಚನ ಸಾಹಿತ್ಯಶ್ರೀ'–2016
### ಪ್ರಶಸ್ತಿ ಪುರಸ್ಕೃತರು
# ಪ್ರೊ. ಜಿ.ಹೆಚ್. ಹನ್ನೆರಡುಮಠ

ಶರಣ ಸಾಹಿತ್ಯ ರಚನೆಯಲ್ಲಿ ಅಪಾರ ಸಾಮರ್ಥ್ಯ ಹೊಂದಿರುವ ಪ್ರೊ. ಹನ್ನೆರಡುಮಠ ಅವರು ಅಧ್ಯಾಪಕ ವೃತ್ತಿಯನ್ನು ಕೈಗೊಂಡು ಅತ್ಯಂತ ಜನಪ್ರಿಯ ಶಿಕ್ಷಕರಾಗಿ, ಬಸವಾದಿ ಶರಣರ ಚಿಂತನೆಗಳಿಗೆ ಸಂಬಂಧಿಸಿದ ಕೃತಿಗಳೂ ಸೇರಿದಂತೆ ಸುಮಾರು ಒಂದುನೂರಕ್ಕೂ ಹೆಚ್ಚು ಸೃಜನಶೀಲ ಕೃತಿಗಳನ್ನು ರಚಿಸಿದ್ದರೂ 'ಎನಗಿಂತ ಕಿರಿಯರಿಲ್ಲ' ಎಂಬ ಸೌಜನ್ಯ ಸ್ವಭಾವದವರು. ಹುಬ್ಬಳ್ಳಿಯಲ್ಲಿ 1940ರಲ್ಲಿ ಜನನ. 1961ರಲ್ಲಿ ಪದವಿ, 63ರಲ್ಲಿ ಸ್ನಾತಕೋತ್ತರ ಪದವಿ. 1964 ರಿಂದ 98 ರವರೆಗೆ ಮೂವತ್ತಮೂರು ಸುದೀರ್ಘ ವರ್ಷಗಳ ಕಾಲ ಇಳಕಲ್ಲಿನ ಶ್ರೀ ವಿಜಯಮಹಾಂತ ಮಹಾವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕ ವೃತ್ತಿ. 2014 ರಲ್ಲಿ ನಿವೃತ್ತಿ.

ವೃತ್ತಿಯ ನಡುವೆಯೂ ಬೆಳೆಸಿಕೊಂಡು ಬಂದ ಪ್ರವೃತ್ತಿ ಅವರ ಬದುಕಿನ ಕೀರ್ತಿಮುಕುಟ. ಶ್ರೀ ಜಗದ್ಗುರು ಮೂರು ಸಾವಿರ ಮಠ ಪ್ರಕಟಿಸಿದ ಆರುನೂರು ಕೃತಿಗಳ ಪ್ರಕಟಣಾ ಕಾರ್ಯದ ನಿರ್ದೇಶನ, ಇಳಕಲ್ಲಿನ ಮಠದ ಸಾಮಾಜಿಕ ಮತ್ತು ಸಾಹಿತ್ಯಿಕ ಕಾರ್ಯಗಳಲ್ಲಿ ಮೂವತ್ತು ವರ್ಷಗಳ ನಿರಂತರ ಸೇವೆ, ಹನ್ನೊಂದು ವರ್ಷ ಮೂರು ಸಾವಿರ ಮಠದ ಪರಂಜ್ಯೋತಿಯ ಸಂಪಾದಕರಾಗಿ ಅನುಪಮ ಸೇವೆ. ಜೊತೆಗೆ ಕರ್ನಾಟಕದ ಎಲ್ಲ ಪ್ರಮುಖ ಪತ್ರಿಕೆಗಳಲ್ಲಿ ಕಾಲಕಾಲಕ್ಕೆ ಕಳೆದ ಐದು ದಶಕಗಳಿಂದ ನೂರಾರು ಲೇಖನಗಳ ಕೊಡುಗೆ. ಕಾದಂಬರಿ, ಕವನ ಸಂಕಲನ, ನಾಟಕ, ಸಣ್ಣ ಕಥೆ, ಹಾಸ್ಯ ಸಾಹಿತ್ಯ, ಲಲಿತ ಚಿಂತನೆ, ಇತಿಹಾಸ, ಜೀವನಚಿತ್ರ, ಸಂಪಾದನೆ, ಸಂಶೋಧನೆ, ಪ್ರವಾಸ ಕಥನ, ಚಲನಚಿತ್ರ, ಧ್ವನಿಸುರುಳಿಗಳಿಗೆ ಸಾಹಿತ್ಯ ರಚನೆ ಮುಂತಾಗಿ ಬಹುಮುಖ ಆಯಾಮಗಳಲ್ಲಿ ತಮ್ಮ ಸಾಮರ್ಥ್ಯವನ್ನು ಅನಾವರಣ ಮಾಡಿ ಪ್ರಸಿದ್ಧರಾಗಿದ್ದಾರೆ.

ಭಗವಂತನು ಕರುಣಿಸಿರುವ ಎಲ್ಲ ಸಾಮರ್ಥ್ಯಗಳನ್ನು ಅವನಿಗೇ ಸಮರ್ಪಿಸಬೇಕೆಂಬ ಭಕ್ತಿ ಪೂರ್ವಕ ಹಂಬಲದ ಶ್ರೀಯುತರು ಸಮಾಜಮುಖಿ ಸಂಸ್ಕಾರದಿಂದ ತಮ್ಮ ಬದುಕಿನ ಎ ಲ್ಲ ಕ್ರಿಯಾತ್ಮಕ ಘಳಿಗೆಗಳನ್ನು ಸಾಹಿತ್ಯ, ಸಂಸ್ಕೃತಿ, ಕಲೆಗಳ ಪ್ರವರ್ಧನೆಯಲ್ಲೇ ಕಳೆದು ಸಾಧನೆಯ ಉತ್ತುಂಗದಲ್ಲಿರುವ ಧನ್ಯಜೀವಿಯಾಗಿದ್ದಾರೆ.

ಶರಣಸಮೂಹದ ಸಮಸ್ತ ಹಂಬಲಗಳಿಗೆ, ಆಶಯಗಳಿಗೆ ಅನ್ವರ್ಥವಾಗಿ ತಮ್ಮ ಬದುಕನ್ನು ರೂಪಿಸಿಕೊಂಡು ಕಳೆದ ಐವತ್ತು ವರ್ಷಗಳಲ್ಲಿ ಶರಣ ಸಾಹಿತ್ಯವನ್ನು ಅಪೂರ್ವವೆನಿಸುವ ರೀತಿಯಲ್ಲಿ ಮೌಲಿಕವಾಗಿ ನಾಡಿಗೆ ನೀಡಿರುವುದನ್ನು ಗುರುತಿಸಿ ನಮ್ಮ ಬಸವ ವೇದಿಕೆಯು 2016ನೇ ಸಾಲಿನ ಪ್ರತಿಷ್ಠಿತ 'ವಚನ ಸಾಹಿತ್ಯಶ್ರೀ' ಪ್ರಶಸ್ತಿಯನ್ನು ಇಂದು ನೀಡಿ ಗೌರವಿಸುತ್ತಿದೆ.

ಶರಣ ಸಂಸ್ಕೃತಿಗೆ ಸಂಬಂಧಿಸಿದ ನಿಮ್ಮ ಸಾಹಿತ್ಯ ಸೇವೆ ನಿರಂತರವಾಗಿ ನಡೆದಿರಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

## ಬಸವ ವೇದಿಕೆ

ಬೆಂಗಳೂರು



**'ವಚನ ಸಾಹಿತ್ಯಶ್ರೀ'–2016**

**ಪ್ರಶಸ್ತಿ ಪುರಸ್ಕೃತರು**

## ಡಾ. ಮಂಗಳಾ ಪ್ರಿಯದರ್ಶಿನಿ

ನಾಡಿನ ಸಾಹಿತ್ಯಿಕ ಕ್ಷೇತ್ರದ ಒಬ್ಬ ಬಹುದೊಡ್ಡ ಸಾಧಕಿಯಾಗಿದ್ದು, ಶೈಕ್ಷಣಿಕ ಕ್ಷೇತ್ರದ ಅಡಿಪಾಯದ ಮೇಲೆ ಕ್ರಿಯಾತ್ಮಕ ಬದುಕನ್ನು ಕಟ್ಟಿಕೊಂಡು ನಾಲ್ಕು ದಶಕಗಳಿಂದಲೂ ನಾಡು ನುಡಿಗಾಗಿ ದುಡಿಯುತ್ತಿರುವ ಡಾ. ಡಿ.ಮಂಗಳಾ ಪ್ರಿಯದರ್ಶಿನಿಯವರು ನಮ್ಮ ನಡುವಿನ ಒಬ್ಬ ಹಿರಿಯ ಸಾಹಿತ್ಯ ಸಾಧಕಿಯಾಗಿದ್ದಾರೆ.

ಉನ್ನತ ಕೀರ್ತಿಶಾಲಿಯಾಗಿ ವಿದ್ಯಾಭ್ಯಾಸ ಪೂರೈಸಿದ ಶ್ರೀಮತಿಯವರು ನಾಡಿನ ಶೈಕ್ಷಣಿಕ ಕ್ಷೇತ್ರವು ಕಂಡ ಒಬ್ಬ ಧೀಮಂತ ಸಾಧಕಿಯಾಗಿದ್ದು ಪದವಿ ಮಟ್ಟದಲ್ಲಿ ಮೂವತ್ತೆಂಟು ವರ್ಷ, ಸ್ನಾತಕೋತ್ತರ ಮಟ್ಟದಲ್ಲಿ ಹದಿನೈದು ವರ್ಷ ನಿರಂತರವಾಗಿ ಸೇವೆ ಸಲ್ಲಿಸಿದ ದಾಖಲೆ ಸ್ಥಾಪಿಸಿದ್ದು, ಇದೀಗ ಬಸವೇಶ್ವರ ನಗರದ ವಿದ್ಯಾವರ್ಧಕ ಮಹಿಳಾ ವಿದ್ಯಾಲಯದ ಪ್ರಾಚಾರ್ಯೆಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

'ನವೋದಯ ಕಾವ್ಯದಲ್ಲಿ ಅನುಭಾವದ ಅಂಶಗಳು' ಎಂಬ ತಮ್ಮ ಮಹಾಪ್ರಬಂಧಕ್ಕಾಗಿ ಡಾಕ್ಟರೇಟ್ ಪಡೆದಿರುವ ಶ್ರೀಮತಿಯವರು ಬೇಂದ್ರೆ, ವೀರಶೈವ ಷಟ್ಪದಿ ಸಾಹಿತ್ಯ, ಆಧುನಿಕ ಕನ್ನಡ ಕಾವ್ಯದ ಸ್ವರೂಪ, ಮೋಳಿಗೆ ಮಹಾದೇವಿ, ಮಹಿಳಾ ಸಾಹಿತ್ಯ ಚರಿತ್ರೆ, ಬೆಳಗೆರೆ ಪಾರ್ವತಮ್ಮ, ವಚನಕಾರ್ತಿಯರ ಅನುಭಾವ ಮುಂತಾದ ಶ್ರೇಷ್ಠ ವೈಚಾರಿಕ ಕೃತಿಗಳನ್ನು ರಚಿಸಿ ಭಾವಾನುಭಾವಗಳ ನೆಲೆಯಲ್ಲಿ ನಾಲ್ಕು ದಶಕಗಳಿಗೂ ಮೀರಿ ತಮ್ಮ ಸೃಜನಶೀಲತೆಯನ್ನು ಸಾಕ್ಷೀಕರಿಸಿದ್ದಾರೆ.

ವಿಚಾರ ಸಾಹಿತ್ಯ, ಅನುವಾದ ಸಾಹಿತ್ಯ, ಅನುಭಾವ ಸಾಹಿತ್ಯ, ಪ್ರವಾಸ ಸಾಹಿತ್ಯ, ಸಂದರ್ಶನಗಳು, ಸಂಪಾದನೆಗಳು, ಸಂಶೋಧನೆಗಳು, ಸಮಾವೇಶಗಳೇ ಮುಂತಾಗಿ ತಮ್ಮ ಬಹುಮುಖವಾದ ಅಭಿವ್ಯಕ್ತಿ ಸಾಮರ್ಥ್ಯವನ್ನು ಅತ್ಯಂತ ಪರಿಶ್ರಮಪೂರ್ವಕವಾಗಿ ನಾಡಿಗೆ ಅಪೂರ್ವವೆನಿಸುವ ರೀತಿಯಲ್ಲಿ ಧಾರೆಯೆರೆದ ಇವರು ಸರಳತೆ, ಸಜ್ಜನಿಕೆಗೆ ಹೆಸರಾಗಿದ್ದಾರೆ.

ಶ್ರೀಮತಿಯವರ ಸಾಹಿತ್ಯಕೃಷಿಗೆ ಅಕ್ಕಮಹಾದೇವಿಯ ವಿಚಾರಧಾರೆ ಹೆಚ್ಚಿನ ಪ್ರೇರಣೆ ನೀಡಿದ್ದು ಅಕ್ಕನ ಬದುಕು ಸಾಧನೆಗಳ ಬಗ್ಗೆ ಹತ್ತಾರು ಲೇಖನ, ನೂರಾರು ಉಪನ್ಯಾಸಗಳನ್ನು ಅವರು ನೀಡಿರುತ್ತಾರೆ. ಅಕ್ಕಮಹಾದೇವಿ ಹಾಗೂ ಶರಣ ಸಂಸ್ಕೃತಿಯ ಕುರಿತಾದ ವಿಭಿನ್ನ ಚಿಂತನಾಕ್ರಮದಿಂದ ಶರಣ ಸಾಹಿತ್ಯ ಕ್ಷೇತ್ರದಲ್ಲೊಂದು ವಿಶಿಷ್ಟ ಛಾಪನ್ನು ಮೂಡಿಸಿದ್ದಾರೆ ಶ್ರೀಮತಿ ಡಿ. ಮಂಗಳಾ ಪ್ರಿಯದರ್ಶಿನಿಯವರು.

ಕನ್ನಡ ಭಾಷೆಯಲ್ಲಿ ರಚಿಸಲ್ಪಟ್ಟ ಅನುಭಾವ ಸಾಹಿತ್ಯವನ್ನು, ಅದರಲ್ಲಿಯೂ ವಿಶೇಷವಾಗಿ ಶರಣರ ಅನುಭಾವ ಸಾಹಿತ್ಯ ಕ್ಷೇತ್ರಕ್ಕೆ ಇವರು ನೀಡಿರುವ ಮಹತ್ತರ ಕೊಡುಗೆಯನ್ನು ಗುರುತಿಸಿ ನಮ್ಮ ವೇದಿಕೆಯು ಪ್ರತಿಷ್ಠಿತ 'ವಚನ ಸಾಹಿತ್ಯಶ್ರೀ' ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ.

ಶರಣ ಸಂಸ್ಕೃತಿಗೆ ಸಂಬಂಧಿಸಿದ ನಿಮ್ಮ ಸಾಹಿತ್ಯ ಸೇವೆ ಇನ್ನೂ ಬಹುಕಾಲ ಯಶಸ್ವಿಯಾಗಿ ನಡೆದಿರಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

# ಅಣ್ಣ ಬಸವಣ್ಣ

**ಡಾ. ಸಿ. ಸೋಮಶೇಖರ,** ಐಎಎಸ್(ನಿ)

ಜಗದ ಕತ್ತಲೆಯನು ಕಳೆದು
ಜ್ಞಾನದ ಜ್ಯೋತಿ ಬೆಳಗಿಸಿದ
ಅಣ್ಣ ಬಸವಣ್ಣ ।

ಸಮಾನತೆ, ಸಹೋದರ ಭಾವದ
ಮಾನವೀಯತೆ ಮೆರೆದ
ಅಣ್ಣ, ಬಸವಣ್ಣ।

ದಲಿತರ, ನೊಂದವರ ಪಾಲಿಗೆ
ಆತ್ಮವಿಶ್ವಾಸದ ಸ್ವಾಭಿಮಾನದ ಸಂಕೇತವಾದ
ಅಣ್ಣ, ಬಸವಣ್ಣ ।

ಸ್ತ್ರೀ ಸಮಾನತೆ ಸಾರುವ ಮೂಲಕ
ಮಹಿಳೆಯರ ಪಾಲಿಗೆ ಸ್ವಾತಂತ್ರ್ಯದಸಿಂಧುವಾದ
ಅಣ್ಣ, ಬಸವಣ್ಣ ।

ಜಾತಿ ದಳ್ಳುರಿಯಿಂದ ಜರ್ಝರಿತಗೊಂಡ
ಸಮಾಜಕ್ಕೆ ಮಾನವಧರ್ಮದ ಸಂದೇಶ ನೀಡಿದ
ಅಣ್ಣ, ಬಸವಣ್ಣ ।

ದುಡಿಮೆಯೇ ದೇವರು, ಕಾಯಕವೇ ಕೈಲಾಸವೆಂಬ
ಶ್ರಮಸಂಸ್ಕೃತಿಯ ಹರಿಕಾರ
ಅಣ್ಣ ಬಸವಣ್ಣ

ಗಳಿಸಿಕೊಂಡುದನೆಲ್ಲ ತಾನೊಬ್ಬ ಬಳಸದೆ
ಸಮಾಜಕ್ಕರ್ಪಿಸಬೇಕೆಂಬ ದಾಸೋಹ ತತ್ವ ಸಾರಿದ
ಅಣ್ಣ, ಬಸವಣ್ಣ ।

ಶರಣರು ಬೆಸಗೊಂಡರೆ ಅದೇ ಶುಭಲಗ್ನ ಎಂದು
ಮೌಢ್ಯತೆಯ ವಿರುದ್ಧ ಎಚ್ಚರಿಕೆ ನೀಡಿದ
ಅಣ್ಣ, ಬಸವಣ್ಣ ।

ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ
ಎಂಬ ನುಡಿಯ ಮೂಲಕ ಸ್ವರ್ಗ ನರಕದ ಕಲ್ಪನೆ ಧಿಕ್ಕರಿಸಿದ
ಅಣ್ಣ, ಬಸವಣ್ಣ ।

ಬಳಿಗೆ ಬಂದವರಿಗೆ 'ಏನಿಬಂದಿರಿ ಹದುಳವಿದ್ದಿರೆ' ಎನಬಾರದೆ
ಎಂದು ತಿಳಿಹೇಳಿ ಸ್ಪಂದಿಸುವ ಆಡಳಿತ ಸೂತ್ರ ನೀಡಿದ
ಅಣ್ಣ ಬಸವಣ್ಣ ।

ಕಳಬೇಡ ಕೊಲಬೇಡವೆಂಬ ಸಪ್ತಸೂತ್ರಗಳ ಮೂಲಕ
ವಿಶ್ವಕ್ಕೆ ಜೀವನ ಸಂವಿಧಾನ ನೀಡಿದ
ಅಣ್ಣ, ಬಸವಣ್ಣ ।

ಅಂತರಂಗ ಶುದ್ಧಿ ಬಹಿರಂಗ ಶುದ್ಧಿಗಳೇ
ಜೀವನದ ಗುರಿಯಾಗಲೆಂದು ಸಾರಿದ
ಅಣ್ಣ, ಬಸವಣ್ಣ ।

ದಯೆಯೇ ಧರ್ಮದ ಮೂಲ ಎಂದು
ಇವನಮ್ಮವ ಇವನಮ್ಮವನೆಂದು ಪ್ರೇಮ ಸಂದೇಶ ಸಾರಿದ
ಅಣ್ಣ, ಬಸವಣ್ಣ ।

ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ
ಎನ್ನುತ್ತಾ ಜೀವನೋತ್ಸಾಹವನು ಮೆರೆದ
ಅಣ್ಣ, ಬಸವಣ್ಣ ।

ಆತ್ಮಕಲ್ಯಾಣದ ಜೊತೆಗೆ ಸಮಾಜ ಕಲ್ಯಾಣವನು
ಸಾಧಿಸಿ ತೋರಿಸಿದ ಕಲ್ಯಾಣದ
ಅಣ್ಣ, ಬಸವಣ್ಣ।

ಜಗದ ಕಣ್ಣ ತೆರೆಸಿ, ಜಗದ ಜನಕೆಲ್ಲ ಲೇಸನೆ ಬಯಸಿದ
ಜಗದ ಸ್ಫೂರ್ತಿ, ಯುಗದ ಜ್ಯೋತಿ
ಅಣ್ಣ, ನಮ್ಮಣ್ಣ ಬಸವಣ್ಣ ।

ಕಲ್ಯಾಣವೆಂಬ ಪ್ರಣತೆಯಲ್ಲಿ
ಭಕ್ತಿರಸವೆಂಬ ತೈಲವನೆರೆದು
ಆಚಾರವೆಂಬ ಬತ್ತಿಯಲ್ಲಿ
ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು
ತೊಳಗಿ ಬೆಳಗುತ್ತಿದ್ದಿತ್ತಯ್ಯಾ ಶಿವನ ಪ್ರಕಾಶ!
ಆ ಬೆಳಗಿನೊಳಗೆ ಒಪ್ಪುತ್ತಿದ್ದರಯ್ಯಾ
ಅಸಂಖ್ಯಾತ ಭಕ್ತಗಣಂಗಳು.
ಶಿವಭಕ್ತರಿರ್ದ ಕ್ಷೇತ್ರವೆ ಅವಿಮುಕ್ತಕ್ಷೇತ್ರವೆಂಬುದು ಹುಸಿಯೆ?
ಶಿವಭಕ್ತರಿರ್ದ ದೇಶ ಪಾವನವೆಂಬುದು ಹುಸಿಯೆ?
ಗುಹೇಶ್ವರಲಿಂಗದಲ್ಲಿ
ಎನ್ನ ಪರಮಾರಾಧ್ಯ ಸಂಗನಬಸವಣ್ಣನ ಕಂಡು
ಬದುಕಿದೆನು ಕಾಣಾ ಸಿದ್ಧರಾಮಯ್ಯಾ.

– ಅಲ್ಲಮಪ್ರಭು

ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ
ಸುಳಿದು ಬೀಸುವ ವಾಯು ನಿಮ್ಮ ದಾನ
ನಿಮ್ಮ ದಾನವನುಂಡು ಅನ್ಯರ ಹೊಗಳುವ
ಕನ್ನಿಗಳನೇನೆಂಬೆ ರಾಮನಾಥ,

– ಜೇಡರ ದಾಸಿಮಯ್ಯ

ತನು ಕರಗದವರಲ್ಲಿ
ಮಜ್ಜನವನೊಲ್ಲೆಯಯ್ಯಾ ನೀನು.
ಮನ ಕರಗದವರಲ್ಲಿ
ಪುಷ್ಪವನೊಲ್ಲೆಯಯ್ಯಾ ನೀನು.
ಹದುಳಿಗರಲ್ಲದವರಲ್ಲಿ
ಗಂಧಾಕ್ಷತೆಯನೊಲ್ಲೆಯಯ್ಯಾ ನೀನು.
ಅರಿವು ಕಣ್ದೆರೆಯದವರಲ್ಲಿ
ಆರತಿಯನೊಲ್ಲೆಯಯ್ಯಾ ನೀನು.
ಭಾವಶುದ್ಧವಿಲ್ಲದವರಲ್ಲಿ
ದೂಪವನೊಲ್ಲೆಯಯ್ಯಾ ನೀನು.
ಪರಿಣಾಮಿಗಳಲ್ಲದವರಲ್ಲಿ
ನೈವೇದ್ಯವನೊಲ್ಲೆಯಯ್ಯಾ ನೀನು.
ತ್ರಿಕರಣ ಶುದ್ಧವಿಲ್ಲದವರಲ್ಲಿ
ತಾಂಬೂಲವನೊಲ್ಲೆಯಯ್ಯಾ ನೀನು.
ಹೃದಯಕಮಲ ಅರಳದವರಲ್ಲಿ
ಇರಲೊಲ್ಲೆಯಯ್ಯಾ ನೀನು.
ಎನ್ನಲ್ಲಿ ಏನುಂಟೆಂದು ಕರಸ್ಥಲವನಿಂಬುಗೊಂಡೆ
ಹೇಳಾ ಚೆನ್ನಮಲ್ಲಿಕಾರ್ಜುನಯ್ಯಾ?

– ಅಕ್ಕಮಹಾದೇವಿ

# ಒಂದು ದಿವ್ಯ ನೆನಪು

ಸಿದ್ಧಗಂಗೆಯ ಸಿದ್ಧಿಪುರುಷ
ಪರಮಪೂಜ್ಯ **ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮೀಜಿಯವರಿಗೆ**
ಪೂರ್ಣಕುಂಭ ಸ್ವಾಗತ
1997ರ ಒಂದು ದಿವ್ಯ ಸವಿನೆನಪು



ಸ್ಥಾಪನೆ: 1991

# ಬಸವ ವೇದಿಕೆ (ರಿ)

ನಂ.10, 'ಬಸವೇಶ್ವರ ನಿಲಯ', 21ನೇ ಅಡ್ಡರಸ್ತೆ, 3ನೇ ಘಟ್ಟ, 4ನೇ ಹಂತ, ಬಸವೇಶ್ವರನಗರ, ಬೆಂಗಳೂರು–560 079.

ಇಮೇಲ್ : ಜಡಿಛಿಠಟಛಿಜಇುಚಿಡಿಚಿ9@ಠಟಚಿಟ.ಛಿಠಟ ಮೊಬೈಲ್ : 9880191228, 9902820022, 9845280303



**ಡಾ. ಸಿ. ಸೋಮಶೇಖರ,** ಐಎಎಸ್
ಸಂಸ್ಥಾಪಕರು ಹಾಗೂ ಅಧ್ಯಕ್ಷರು



**ಎಸ್. ಷಡಕ್ಷರಿ**
ಉಪಾಧ್ಯಕ್ಷರು



**ಎಂ. ರುದ್ರಯ್ಯ**
ಕೋಶಾಧ್ಯಕ್ಷರು



**ನಾ. ಮಲ್ಲಿಕಾರ್ಜುನ**
ಕಾರ್ಯದರ್ಶಿ



**ಎಂ.ಡಿ. ಮಹಾಬಲೇಶ್ವರ**
ಕಾರ್ಯದರ್ಶಿ



**ಜರಗನಹಳ್ಳಿ ಶಿವಶಂಕರ**
ಸಂಚಾಲಕರು



**ಕೆ.ವಿ.ನಾಗರಾಜಮೂರ್ತಿ**
ಸಂಚಾಲಕರು

**ಕಾರ್ಯಕಾರಿ ಸಮಿತಿ ಸದಸ್ಯರು :**

ಪಿ. ವಿಜಯಕುಮಾರ್, ಶ್ರೀಮತಿ ಗೀತಾ ಜಯಂತ್, ಎಸ್. ಚಂದ್ರಶೇಖರ ಉಪಾಲ, ಜೆ.ಎಸ್. ಸಚ್ಚಿದಾನಂದ ಜವಳಿ, ಎಸ್. ಚಂದ್ರಮೌಳಿ, ಬಿ.ಸಿ. ಪ್ರಕಾಶ್, ಪಾಲನೇತ್ರ ವಿ.

- ದಯವಿಲ್ಲದಾ ಧರ್ಮವದೇವುದಯ್ಯಾ
  ದಯವೇ ಬೇಕು ಸರ್ವ ಪ್ರಾಣಿಗಳೆಲ್ಲರಲ್ಲಿ,
  ದಯವೇ ಧರ್ಮದ ಮೂಲವಯ್ಯ,
  ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ,

- ಕಾಯಕದಲ್ಲಿ ನಿರತನಾದಡೆ,
  ಗುರುದರ್ಶನವಾದಡೂ ಮರೆಯಬೇಕು,
  ಲಿಂಗಪೂಜೆಯಾದಡೂ ಮರೆಯಬೇಕು,
  ಜಂಗಮ ಮುಂದೆ ನಿಂದಿದ್ದಡೂ ಹಂಗ ಹರಿಯಬೇಕು,
  ಕಾಯಕವೆ ಕೈಲಾಸವಾದ ಕಾರಣ
  ಅಮರೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು.

- ನುಡಿದರೆ ಮುತ್ತಿನ ಹಾರದಂತಿರಬೇಕು
  ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
  ನುಡಿದರೆ ಲಿಂಗಮೆಚ್ಚಿ ಅಹುದಹುದೆನಬೇಕು
  ನುಡಿಯೊಳಗಾಗಿ ನಡೆಯದಿದ್ದೊಡೆ
  ಕೂಡಲಸಂಗಮದೇವನೆಂತೊಲಿವನಯ್ಯ?

- ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ,
  ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯಾ,
  ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯಾ,
  ಪರುಷದ ಬಲದಿಂದ ಅವಲೋಹದ ಕೇಡು ನೋಡಯ್ಯಾ,
  ಕೂಡಲಸಂಗನ ಶರಣರ ಅನುಭಾವದ ಬಲದಿಂದ
  ಎನ್ನ ಭವದ ಕೇಡು ನೋಡಯ್ಯಾ



**ಬಸವ ವೇದಿಕೆ**
ಶ್ರೀ ಬಸವೇಶ್ವರ ನಿಲಯ, ನಂ.೧೦
೩ನೇ ವಿಭಾಗ, ೪ನೇ ಹಂತ
ಬಸವೇಶ್ವರನಗರ
ಬೆಂಗಳೂರು–೫೬೦೦೭೯.
ಮೊ: ೯೮೮೦೧೯೧೨೨೮
ಇಮೇಲ್:drcsomasekhara9@gmail.com